*ರಾಷ್ಟ್ರೀಯ ಕಲ್ಪನೆಯ ಶಿಕ್ಷಣ*

*(ರಾಷ್ಟ್ರೀಯತೆ ಮೂಡಿಸುವುದರಲ್ಲಿ ಶಿಕ್ಷಣದ ಪಾತ್ರ)*

**ಶಾಲಿನಿ ಅದ್ವಾನಿ**

ನಮ್ಮ ದೇಶದ ನೀತಿನಿರೂಪಕರ ದೃಷ್ಟಿಕೋನ ಮತ್ತು ಉದ್ದೇಶಗಳಲ್ಲಿ ಪ್ರತಿಫಲಿತವಾಗಿರುವಂತೆ ಮತ್ತು ಪಠ್ಯಪುಸ್ತಕಗಳ ಸ್ವರೂಪ ಮತ್ತು ಸಂರಚನೆಗಳಲ್ಲಿ ಮೂರ್ತವಾಗಿರುವ ರೀತಿಯಲ್ಲಿ ನಮ್ಮ ಶಿಕ್ಷಣವ್ಯವಸ್ಥೆಯು ರಾಷ್ಟ್ರವನ್ನು ರೂಪಿಸುವ ರೀತಿಯನ್ನು ಈ ಪ್ರಬಂಧವು ಪರಿಶೀಲಿಸಬಯಸುತ್ತದೆ. ಪಠ್ಯಕ್ರಮದಲ್ಲಿ ಮಂಡಿತವಾದ ಪರಸ್ಪರ ಪೂರಕ ವಿಚಾರಸರಣಿಗಳು, ಮತ್ತು ವೈರುಧ್ಯದ ವಿಚಾರಗಳನ್ನು ವಿಶ್ಲೇಷಿಸುವುದರ ಮೂಲಕ ಈ ಪ್ರಬಂಧವು ಭಾರತೀಯ ಇತಿಹಾಸ, ಸಮಾಜ ಮತ್ತು ಆರ್ಥಿಕತೆಗಳ ಸಂದರ್ಭದಲ್ಲಿ ಅಗತ್ಯತೆ, ಪುರಾಣಾತ್ಮಕತೆ ಮತ್ತು ರಮ್ಯತೆಯ ಪ್ರಕ್ರಿಯೆಯನ್ನು ಗಮನಿಸುತ್ತದೆ. ಮತ್ತು ಸಾಮಾಜಿಕನ್ಯಾಯ ಮತ್ತು ಅಭಿವೃದ್ಧಿಗಳ ಪರ್ಯಾಯ ಮಾದರಿಗಳು ಈ ಪ್ರಕ್ರಿಯೆಯನ್ನು ಪ್ರಶ್ನಿಸುವುದಾಗಲೀ, ಶೋಧಿಸುವುದಾಗಲೀ ಒಪ್ಪಿತವಲ್ಲದ ಸಂಗತಿ ಎಂದೂ ಗಮನಿಸುತ್ತದೆ.

I

ಮೊದಲಿಗೆ ನಾವು
ತಿದ್ದಿ ಬರೆಯುತ್ತೇವೆ
ಚರಿತ್ರೆ ಪುಸ್ತಕಗಳನ್ನು.
ವಿಜಯೀರಾಜ ವಿಲಿಯಂನನ್ನು
ಹಿಂಪುಟಕ್ಕೆ ಸರಿಸುತ್ತೇವೆ
ಕಡಲ್ಗಳ್ಳ ಮೋರ್ಗನ್ ಅನ್ನು
ಅಡಿಟಿಪ್ಪಣಿಗೆ ಸೇರಿಸುತ್ತೇವೆ

ಹೆಮ್ಮೆಯಿಂದ ಮನನ
ಮಾಡುತ್ತೇವೆ ನಾವು
ನಮ್ಮ ಸ್ವಂತ ಚರಿತ್ರೆಯನ್ನು
ಮುಂಬರುವ ಮುದುಕಿಯರು
ಅರಿತಾರು ಆರ್ಕ್ಟಿಕ್ ಸಮುದ್ರದ ಬಗ್ಗೆ.
ಆದರೆ ಹೆಚ್ಚು ತಿಳಿದಾರು
ಅಟ್ಲಾಂಟಿಕ್ ಸಾಗರದ ನಡುವಿನ
ಕೆರೆಬಿಯನ್ ಸಮುದ್ರದ ಕುರಿತು.[1]

ಜ್ಞಾನದ ಸಂರಚನೆಯ ಪ್ರಕ್ರಿಯೆಯು ಅಧಿಕಾರದ ಸಂರಚನೆಯೊಡನೆ ಆಂತರಿಕವಾಗಿ ತಳುಕು ಹಾಕಿಕೊಂಡಿದೆ ಎಂಬುದು ಇಂದಿನ ಸಂದರ್ಭದ ತಥ್ಯ. ವಸಾಹತಾಗಿದ್ದ ದೇಶದಲ್ಲಿ ಆಳುವವರ ಆರ್ಥಿಕ, ಸಾಮಾಜಿಕ ಗರಡಿಯೊಳಗೆ ಹೂಡಿದ

ತಂತ್ರದ ಆಟವಿದು. ಆದರೆ ವಸಾಹತೋತ್ತರ ಸಂದರ್ಭದಲ್ಲಿ  ಆ ರಾಷ್ಟ್ರಗಳು  ತಮ್ಮ ದೇಶಕ್ಕೆ ಮಹತ್ವದ್ದೆನಿಸುವ ಅರಿವು ಅಥವಾ  ಜ್ಞಾನದ ಬಗ್ಗೆ ಮಂಡಿಸುವ ಪರ್ಯಾಯ ನಿರೂಪಣೆಗಳ ಮೂಲಕ ತಮ್ಮ ದೇಶವನ್ನು ಮರುರೂಪಿಸುವ, ಮರುಶೋಧಿಸುವ ಆಶಯ ಹೊಂದಿರುತ್ತವೆ. ಭಾರತದಲ್ಲಿ 1947ರಿಂದಲೂ ರ‍ಾಷ್ಟ್ರನಿರ್ಮಾಣದ ಯೋಜನೆಯು ಶಿಕ್ಷಣನೀತಿಯ ಕೇಂದ್ರಬಿಂದುವಾಗಿದೆ. ಆದರೆ ಇದು ಅಹಿತಕರವಾದ, ವಿವಾದಾತ್ಮಕವಾದ ಪ್ರಕ್ರಿಯೆಯಾಗಿದೆ. ಇಂಗ್ಲಿಷ್ ಮಾತನಾಡುವ ಬುದ್ದಿಜೀವಿ ವರ್ಗ ಮತ್ತು ಹಿಂದಿ ಪ್ರತಿಪಾದಕ ವರ್ಗಗಳ ನಡುವೆ; ಸೆಕ್ಯುಲರ್ ವಾದಿಗಳು ಮತ್ತು ಮಧ್ಯಪ್ರದೇಶ, ಉತ್ತರಪ್ರದೇಶಗಳ ಪರಿಷ್ಕರಣಾವಾದಿ ಬಿಜೆಪಿ ಸರಕಾರಗಳ ನಡುವೆ; ಪಟ್ಟಣದ ಮಧ್ಯಮವರ್ಗದ ಜನ ಮತ್ತು ನವಶಕ್ತಿಯಿಂದ ಸಜ್ಜಾದ ಗ್ರಾಮೀಣ ಕೆನೆಪದರದ ಜನರ ನಡುವೆ ಶಿಕ್ಷಣಕ್ಷೇತ್ರವು ರಾಷ್ಟ್ರವೆಂದರೇನೆಂದು ವಿಭಿನ್ನ ವ್ಯಾಖ್ಯೆಗಳಿಗೆ ಒಳಪಡಿಸುವ ತಾಣವಾಗಿದೆ. ಏಕೆಂದರೆ ಈ ಕ್ಷೇತ್ರವು ಅಧಿಕಾರ ಬಯಸುವವರು ತಮ್ಮ ಹೆಜ್ಜೆಗುರುತುಗಳನ್ನು ದಾಖಲಿಸುವ ತಾಣವಾಗಿದೆ.

ರೂಪಿತವಾಗುವ ರಾಷ್ಟ್ರದ ಗುಣಲಕ್ಷಣಗಳೇನು, ಅದರ ವ್ಯಾಖ್ಯೆ ನೀಡುವವರಾರು? ರಾಷ್ಟ್ರದ ವ್ಯಾಖ್ಯೆ ನೀಡುವ ಕಾರ್ಯವು ಮೊದಲಿಗಿಂತಾ ಇಂದು ಹೆಚ್ಚು ಸಂಕೀರ್ಣವಾಗಿದೆ. ಏಕೆಂದರೆ ಇತರ ಯಾವುದೇ ಕಲ್ಪನಾಂಶಗಳಂತೆ ರಾಷ್ಟ್ರ ಎಂಬುದು ಕೂಡಾ ಬೇರೆ ಬೇರೆ ಕಾರಣಗಳಿಗಾಗಿ ಬೇರೆಬೇರೆ ಕಾಲಗಳಲ್ಲಿ ಬೇರೆಬೇರೆ ರೀತಿಗಳಲ್ಲಿ ಕಲ್ಪಿಸಿಕೊಂಡಿದ್ದು. ಅದು ಕಾಲಾತೀತವಾದ ಒಂದು ವಸ್ತುನಿಷ್ಠ ವಿಷಯವಲ್ಲ; ಸ್ವಭಾವತಃ ಅದು ಖಚಿತವೂ ಅಲ್ಲ.

ವಸಾಹತೋತ್ತರ ಭಾರತದ ಆಡಳಿತಶಾಹಿ ವ್ಯವಸ್ಥೆಯಿಂದಾಗಿ ಪ್ರಬಲವಾದ ವಿಶಿಷ್ಟ ಅಂಶ ಮೂಡಿಬರುತ್ತಿದೆ. ಅದರ ಅರ್ಥವೆಂದರೆ (ಕನಿಷ್ಠ ಪಕ್ಷ ಮೇಲ್ನೋಟಕ್ಕೆ ಕಾಣುವಂತೆ) ರಾಷ್ಟ್ರವೆಂದರೇನು ಎಂಬ ವ್ಯಾಖ್ಯೆಯು ಪ್ರಭುತ್ವದ, ರಾಜಕೀಯನೀತಿಯ ವಿಧಿವಿಧಾನಗಳ ಹತೋಟಿಯಲ್ಲಿದೆ. ಈಚಿನ ಅನೇಕ ಅಧ್ಯಯನಗಳು ರಾಜ್ಯನಿಯಂತ್ರಿತ ಶಿಕ್ಷಣದ ಸ್ವರೂಪವನ್ನು ಎತ್ತಿತೋರಿಸಿವೆ. (ಆದರೂ ರಾಜ್ಯವೆಂದರೆ ಬಹುತೇಕ ಮಧ್ಯಮವರ್ಗದ ಪ್ರಾಬಲ್ಯವೆಂದೇ ಅವು ವಿವರಿಸಿವೆ.)[2] ಆದರೆ ನಮಗೇ ಗೋಚರಿಸುವಂತೆ ಈಗ ರೂಪಿತವಾಗಿರುವುದು ಎಲ್ಲರನ್ನೂ ಒಳಗೊಳ್ಳುವ ಬುದ್ದಿಜೀವಿ ವರ್ಗದ ಅಜೆಂಡಾ. ಅದು ಪರಸ್ಪರ ವಿರುದ್ಧ ವ್ಯಾಖ್ಯೆಗಳಿಂದ ಕೂಡಿರುವ ಸ್ವಲ್ಪ ಮಟ್ಟಿಗೆ ಮಾತ್ರ  ರಾಜ್ಯನೀತಿಯಿಂದ ಪ್ರೇರಿತವಾದ ಕಾರ್ಯಸೂಚಿ. ಆರ್ಥಿಕ ಅನುಕೂಲಗಳಿಗಾಗಿ, ಪ್ರಾಬಲ್ಯಕ್ಕಾಗಿ, ಪ್ರತಿಷ್ಠೆಗಾಗಿ ಬೇರೆಬೇರೆ ಪಂಗಡಗಳು ಶಿಕ್ಷಣ ಎಂಬ ಗರಡಿಯಲ್ಲಿ ಬಹುಮುಖಿ ಹೋರಾಟ ನಡೆಸಿವೆ.[3]

ಶಿಕ್ಷಣವ್ಯವಸ್ಥೆಯು ರಾಷ್ಟ್ರವನ್ನು ರೂಪಿಸಬಯಸುವ ರೀತಿಯಲ್ಲಿ ಎರಡು ವಿಭಿನ್ನವಾದ ಆದರೆ ಪರಸ್ಪರ ಹೊಂದಿಕೊಳ್ಳಬಹುದಾದ ಅಂತರ್ ಸಂಬಂಧ ಹೊಂದಿರುವ ಹಾದಿಗಳಿವೆ. ಮೊದಲನೆಯದು ಚಿಂತನಾತ್ಮಕ ವ್ಯಾಖ್ಯೆಯ ಮೂಲಕ, ರಾಷ್ಟ್ರೀಯ ಸಾಂಸ್ಕೃತಿಕ ಪ್ರತೀಕವನ್ನು ರೂಪಿಸುತ್ತಾ ನಿಷ್ಠೆ, ಭಾವತೀವ್ರತೆ ಮತ್ತು ಪುರಾಣದ  ಆಯಾಮಗಳಲ್ಲಿ ರಾಷ್ಟ್ರವನ್ನು ಕಂಡುಕೊಳ್ಳುವ ಮಾರ್ಗ. ಎರಡನೆಯದು ರಾಷ್ಟ್ರೀಯತೆಯ ಮಾನದಂಡವೇನು ಎಂದು ನಿಗದಿಪಡಿಸುತ್ತಾ ಸಾಮಾಜಿಕ ಸ್ತರಗಳಲ್ಲಿ ಮತ್ತು ಅಭಿವೃದ್ದಿಯ ಹಿನ್ನೆಲೆಯಲ್ಲಿ ಪ್ರಚಲಿತ ವಿದ್ಯಮಾನಗಳನ್ನು, ದೇಶದ ಚಟುವಟಿಕೆಗಳನ್ನು ಆಧರಿಸಿ ದೇಶವನ್ನು ವಿವರಿಸುವ ಮಾರ್ಗ.

ಈ ಪ್ರಬಂಧದಲ್ಲಿ ನಾನು ನೀತಿನಿರೂಪಕರ ಕಾಣ್ಕೆ ಮತ್ತು ಉದ್ದೇಶಗಳನ್ನು ಮೊದಲಿಗೆ ಪರಿಗಣಿಸಿ ನಂತರ ಸರಕಾರಿ ಪಠ್ಯಪುಸ್ತಕಗಳಲ್ಲಿ ಮಂಡಿತವಾದ ಕಲ್ಪನಾಂಶಗಳ ರಚನೆ ಸ್ವರೂಪಗಳನ್ನು ಪರಿಗಣಿಸಿ ಈ ಪ್ರಕ್ರಿಯೆಯನ್ನು ಪರಿಶೀಲಿಸುತ್ತೇನೆ. ಅದರ ಸಲುವಾಗಿ ನಾನು 1947ರಿಂದಲೂ ನಿಯೋಜಿತವಾದ ಅನೇಕ ಶೈಕ್ಷಣಿಕ ವರದಿಗಳನ್ನು ಹಾಗೂ ಉತ್ತರ ಪ್ರದೇಶ ಮತ್ತು ಕೇರಳ ರಾಜ್ಯಗಳ ಸರ್ಕಾರೀ ಪಠ್ಯಪುಸ್ತಕಗಳು ಮತ್ತು NCERTಯ ಪಠ್ಯಪುಸ್ತಕಗಳನ್ನು ಗಮನಿಸುತ್ತೇನೆ. ಕೆಲವೆಡೆ ಈಗಾಗಲೇ ಚರಿತ್ರೆಯ ಪಠ್ಯಗಳ ಬಗ್ಗೆ ಅಧ್ಯಯನ ನಡೆದಿದ್ದರೂ ಭಾಷಾಪುಸ್ತಕಗಳನ್ನು ಆಧರಿಸಿ ಈ ಬಗೆಯ ಅಧ್ಯಯನ ನಡೆದೇ ಇಲ್ಲ ಎನ್ನಬಹುದು. ಭಾಷಾಪುಸ್ತಕಗಳಲ್ಲಿ ಏನಿರಬೇಕೆಂದು ನಿರ್ದಿಷ್ಟವಾಗಿ ತಿಳಿಸಿಲ್ಲವಾಗಿ, ಆ ಪುಸ್ತಕದ ಚೌಕಟ್ಟು ತುಂಬಾ ಮುಕ್ತವಾಗಿರುವುದರಿಂದ ಶಿಕ್ಷಣವ್ಯವಸ್ಥೆಯಲ್ಲಿ ಅಂತರ್ಗತವಾದ ಶ್ರದ್ದೆ, ನಂಬಿಕೆ, ಊಹಾತ್ಮಕ ವಿಚಾರಗಳನ್ನು ಪರಿಶೀಲಿಸಲು ಸಾಧ್ಯ. ಸಮಾಜ ಪುಸ್ತಕಗಳಲ್ಲಿ ರೂಪಿತವಾಗಿದ್ದಕ್ಕಿಂತ ಹೆಚ್ಚು ಪ್ರಬಲವಾಗಿ ರೂಪಿತವಾದ ಆದರೆ ಮೇಲ್ನೋಟಕ್ಕೆ ಎದ್ದು ಕಾಣದ ವ್ಯಾಖ್ಯೆಯನ್ನು ಭಾಷಾಪುಸ್ತಕದ ಪದ್ಯ, ಕತೆಗಳ ಮೂಲಕ ಮಂಡಿಸಲು ಸಾಧ್ಯ.

## II

ಶಿಕ್ಷಣದ ಬಗ್ಗೆ ರಾಜ್ಯನೀತಿಯ ಸ್ಪಷ್ಟ ಧೋರಣೆಯನ್ನು ಶೋಧಿಸುವುದು ಹಾಗೆಯೇ ಪಠ್ಯಪುಸ್ತಕಗಳಲ್ಲಿ ಅದು ಹೇಗೆ ಮೂಡಿದೆ ಎಂದು ಶೋಧಿಸುವುದು ಎಂದರೆ ಅನೇಕ ವ್ಯಾಖ್ಯಾನಗಳನ್ನು ತೆರೆದಿಟ್ಟಂತಾಗುತ್ತದೆ. ಒಂದೆಡೆ ದೇಶವನ್ನು ವ್ಯಾಖ್ಯಾನಗೈಯುವ, ರಾಷ್ಟ್ರವೆಂದರೆ ಸಂಭ್ರಮಿಸುವ ಬಗ್ಗೆ ಅನಿವಾರ್ಯ ಪ್ರಾಶಸ್ತ್ಯ; ಇನ್ನೊಂದೆಡೆ ಅಲ್ಲಲ್ಲಿ ಮೌನಗೂಢಗಳು, ಸ್ಪಷ್ಟ ಪ್ರತಿಪಾದನೆಗಳು, ಈ ಸಮಗ್ರ ವ್ಯಾಖ್ಯಾನಗಳಿಗೆ ಪ್ರಬಲ ಸವಾಲುಗಳನ್ನು ತೆರೆದಿಡುತ್ತಲೇ ಕಳವಳ, ಇರುಸುಮುರುಸುಗಳೊಡನೆ ಈ ತಿಕ್ಕಾಟಗಳನ್ನು ಸಮನ್ವಯಗೊಳಿಸುವ ಪ್ರಯತ್ನವನ್ನೂ ತೆರೆದಿಡುತ್ತದೆ.

ಇದು 1947ರಿಂದ ನಿಯೋಜಿಸಲಾದ ಬಹುತೇಕ ಎಲ್ಲ ಸಮಿತಿಗಳ ಶೈಕ್ಷಣಿಕ ವರದಿಗಳಲ್ಲೂ ಸ್ಪಷ್ಟವಾಗಿ ಗೋಚರಿಸುತ್ತದೆ. ಶಿಕ್ಷಣವನ್ನು ಎಲ್ಲಕ್ಕೂ ರಾಮಬಾಣ ಎಂದು ಪ್ರಬಲವಾಗಿ ನಂಬಿಕೊಳ್ಳಲಾಗಿದೆ. ರಾಷ್ಟ್ರೀಯ ಸಂಸ್ಕೃತಿಯನ್ನು ರೂಪಿಸುವ ಪ್ರಮುಖ ಸಾಧನ ಎಂದೂ ಪರಿಗಣಿಸಲಾಗಿದೆ. 1952ರ ಹೊಸ್ತಿಲಲ್ಲೇ ಮಾಧ್ಯಮಿಕ ಶಿಕ್ಷಣದ ಬಗ್ಗೆ ಮೊದಲಿಯಾರ್ ಸಮಿತಿ ವರದಿಯಲ್ಲಿ ಇದು ನಿಚ್ಚಳವಾಗಿದೆ.

> "ಯುವಕರನ್ನು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ, ಸಾಮಾಜಿಕ ಪುನರ್ರಚನೆಯಲ್ಲಿ ಸಕ್ರಿಯ ಪಾತ್ರ ವಹಿಸುವಂತಹಾ ಉತ್ತಮ ನಾಗರಿಕರನ್ನಾಗಿಸಲು ತರಬೇತು ನೀಡುವುದು ಮಾಧ್ಯಮಿಕ ಶಿಕ್ಷಣದ ಗುರಿ" [4]

ಈ ವರದಿಯಲ್ಲಾಗಲೀ, ವ್ಯವಸ್ಥೆಯ ಇತರೆಡೆಗಳಲ್ಲಾಗಲೀ ಕಾಣುವ ಅಭಿಪ್ರಾಯದಂತೆ ರಾಷ್ಟ್ರ ಎಂದರೆ ಭಿನ್ನತೆಯಿಲ್ಲದ, ಒಂದೇ ಅಸ್ತಿತ್ವ ಎಂದೇ ಪ್ರತಿಪಾದಿತವಾಗಿದೆ ಎಂಬುದು ಒಂದು ಕುತೂಹಲಕರ ಅಂಶ. ಮುಂದಿನ ನಲವತ್ತು ವರ್ಷಗಳಿಗೆ ಧ್ವನಿರೂಪವನ್ನು ಮತ್ತು ಮಾರ್ಗವನ್ನು ಈ ಮೊದಲಿಯಾರ್ ವರದಿ ನೀಡಿದೆ. ದೇಶ ಎಂದರೆ ಏಕಶಿಲಾತ್ಮಕವಾದ ಏಕಸೂತ್ರದ ಅಸ್ತಿತ್ವ ಎಂದು ಗ್ರಹಿಸುವ ಈ ವರದಿಯು ದೇಶವು ವಿವಿಧತೆಯ ಅಂಶಗಳಿಂದ ಕೂಡಿದೆ ಎಂದು ಗ್ರಹಿಸುವುದನ್ನು ತಿರಸ್ಕರಿಸುತ್ತದೆ. ವ್ಯವಸ್ಥೆಯಲ್ಲಿ ಅನಿವಾರ್ಯವಾಗಿರುವ ಪರಸ್ಪರ ವೈರುಧ್ಯದ, ಪರಸ್ಪರ ಪ್ರಶ್ನಿಸುವ ಅಂಶಗಳನ್ನು ಅದು ಅಪಾಯಕಾರಿ ಮತ್ತು ದೇಶಭಂಜಕ ಎಂದು ಗ್ರಹಿಸುತ್ತದೆ.

"ಪ್ರಾಂತೀಯತೆ, ಪ್ರಾದೇಶಿಕತೆ ಮತ್ತು ಇತರ ವರ್ಗೀಕರಣ ವ್ಯತ್ಯಾಸಗಳ ಪ್ರವೃತ್ತಿಯು ಇತ್ತೀಚಿನ ದಿನಗಳಲ್ಲಿ ಅನಪೇಕ್ಷಿತವಾಗಿ ಬೆಳೆಯುತ್ತಿದೆ. ಈ ಪ್ರವೃತ್ತಿಯು ಪ್ರತಿಕೂಲ ಪರಿಣಾಮಗಳಿಂದ ತುಂಬಿದೆ. ಜನರ ಮನಸ್ಸನ್ನು ಸರಿಯಾದ ದಿಕ್ಕಿನಲ್ಲಿ ಪುನರ್ರೂಪಿಸಲು ಶ್ರಮಿಸುವುದು ಶಿಕ್ಷಣತಜ್ಞರ ಮತ್ತು ರಾಜನೀತಿಜ್ಞರ ಆದ್ಯ ಕರ್ತವ್ಯ. ಈ ಪ್ರವೃತ್ತಿಗಳನ್ನು ಹತೋಟಿಯಲ್ಲಿಡಲು ಶಿಕ್ಷಣವು ತನ್ನ ಪಾತ್ರವನ್ನು ಸಮರ್ಥವಾಗಿ ನಿರ್ವಹಿಸದಿದ್ದರೆ ರಾಷ್ಟ್ರೀಯತೆಯ ಸಮನ್ವಯ ಶಕ್ತಿಯನ್ನು , ಒಗ್ಗಟ್ಟನ್ನು ಸಬಲಗೊಳಿಸದಿದ್ದರೆ ನಮ್ಮ ಸ್ವಾತಂತ್ರ್ಯ, ನಮ್ಮ ರಾಷ್ಟ್ರೀಯ ಏಕತೆ ಹಾಗೆಯೇ ನಮ್ಮ ಪುರೋಭಿವೃದ್ಧಿಗಳು ತೀವ್ರವಾಗಿ ಧಕ್ಕೆಗೊಳಗಾಗುತ್ತವೆ ಎಂಬುದು ನಮ್ಮ ಆತಂಕ."[5]

ಇತ್ತೀಚಿನವರೆಗೂ ಎಲ್ಲೆಡೆ ಅನುರಣಿಸುವಂತೆ ಈ ಮಾತುಗಳು ಪ್ರಬಲವಾಗಿ ಪ್ರತಿಪಾದಿತವಾಗಿರುವುದರಿಂದ ಇದನ್ನು ಇನ್ನಷ್ಟು ವಿಸ್ತಾರವಾಗಿ ತಿಳಿಸುವುದು ಮುಖ್ಯ.[6] ಸ್ವಾತಂತ್ರ್ಯ ಪಡೆಯಲೇಬೇಕೆಂಬ ತುರ್ತಿನಿಂದ ಇಬ್ಭಾಗವಾಗಿ ಐದೇ ವರ್ಷವಾಗಿದ್ದ ಸಂದರ್ಭದಲ್ಲಿ(1952), ಆಗ ತಾನೇ ರೂಪುಗೊಳ್ಳುತ್ತಿರುವ ದೇಶದಲ್ಲಿ, ಪ್ರಬಲವಾದ ಕೇಂದ್ರ ವ್ಯಕ್ತಿತ್ವ ಬೇಕೆಂಬ ಆತಂಕ ಅರ್ಥವಾದೀತು. ಆದರೆ ಮುವ್ವತ್ತು ವರ್ಷಗಳ ನಂತರ ರೂಪಿತವಾದ ಹೊಸಶಿಕ್ಷಣನೀತಿ ಎಂದೇ ಹೆಸರಾದ 1986ರ ರಾಷ್ಟ್ರೀಯ ಶಿಕ್ಷಣ ನೀತಿಯೂ ಹೀಗೇ ಹೇಳಿ ಸಮಗ್ರತೆಯ, ಏಕರೂಪದ ದೇಶವನ್ನು ವ್ಯಾಖ್ಯಾನ ಮಾಡುವ ಆತಂಕವನ್ನು ಅದೇ ತೀವ್ರತೆಯಲ್ಲಿ ತೋರಿಸಿದೆ. ಜಾತ್ಯತೀತತೆಯ, ಸಹಿಷ್ಣುತೆಯ ಮೌಲ್ಯಗಳನ್ನು ಶಿಕ್ಷಣವು ಕಲಿಸುವ ಅಗತ್ಯವನ್ನು ಒತ್ತಿ ಹೇಳುತ್ತಾ ಏಕರೂಪದ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನೂ, ದೇಶದ ಸ್ವಾತಂತ್ರ್ಯ ಚಳುವಳಿಯ ಚರಿತ್ರೆ, ಸಾಂವಿಧಾನಿಕ ಕರ್ತವ್ಯಗಳು, ರಾಷ್ಟ್ರೀಯತೆಯನ್ನು ಬೆಳೆಸುವ ಇತರ ವಿಷಯಗಳೂ ಅಡಕವಾಗಿರುವ ಏಕರೂಪದ ಪಠ್ಯಕ್ರಮವನ್ನೂ ಈ ನೀತಿಯು ಪ್ರತಿಪಾದಿಸುತ್ತದೆ. ಅದರ ಆಶಯದಂತೆ

"ಭಾರತದ ಸಮಾನ ಸಾಂಸ್ಕೃತಿಕ ಪರಂಪರೆ, ಜಾತ್ಯತೀತತೆ, ಪ್ರಜಾಸತ್ತಾತ್ಮಕತೆ, ಸಮಾನತಾವಾದ ಲಿಂಗ ಸಮಾನತೆ, ಪರಿಸರ ಸಂರಕ್ಷಣೆ, ಸಾಮಾಜಿಕ ಅಡೆತಡೆಗಳನ್ನು ತೊಡೆದುಹಾಕುವಿಕೆ, ಕುಟುಂಬಯೋಜನೆಯ ಗ್ರಹಿಕೆ, ವೈಜ್ಞಾನಿಕ ಮನೋಧರ್ಮದ ಬೀಜಾರೋಪಣದಂತಹಾ ಮೌಲ್ಯಗಳನ್ನು ಬೆಂಬಲಿಸುವಂತೆ, ಪ್ರೋತ್ಸಾಹಿಸುವಂತೆ ಏಕರೂಪ ಪಠ್ಯಕ್ರಮದ ಈ ಎಲ್ಲ ಅಂಶಗಳೂ ಎಲ್ಲ ಪಠ್ಯವಿಷಯಗಳಲ್ಲೂ ಮೂಡಿಬರುವಂತೆ ರೂಪಿತವಾಗಬೇಕು." [7]

ಯಾವುದೇ ಸಮಾಜಕ್ಕೆ ಮುಖ್ಯವೆನಿಸಬಹುದಾದ ಮುಖ್ಯ ವಿಷಯಗಳೂ ಇಲ್ಲಿವೆ. ಆದರೂ ಈ ವಿಷಯಗಳ ಪಟ್ಟಿಯಲ್ಲಿ ಏಕಸೂತ್ರತೆ ಇಲ್ಲ.. ಸಮಾನ ಏಕರೂಪ ಪಠ್ಯಕ್ರಮದ ದೃಷ್ಟಿಯಂತೆ ಸಾಂಸ್ಕೃತಿಕ ರಾಷ್ಟ್ರೀಯತೆಗೆ, ಸಮಾನ ಭಾರತೀಯ ಪರಂಪರೆಗೆ ಒತ್ತುನೀಡುವುದು ಒಂದೆಡೆ, ಪ್ರಜಾಸತ್ತಾತ್ಮಕತೆ,ಸಮಾನತಾವಾದ ಮುಂತಾದ ಉದಾರ, ಪುರೋಗಾಮೀ ಮೌಲ್ಯಗಳಿಗೆ ಪ್ರಾಶಸ್ತ್ಯ ಇನ್ನೊಂದೆಡೆ. ಅವುಗಳೊಡನೆಯೇ ಅದೇ ಸ್ತರದಲ್ಲಿ ಕುಟುಂಬಯೋಜನೆಯಂತಹಾ ರಾಜ್ಯನೀತಿಯ ನಿರ್ದಿಷ್ಟ ಅಂಶಗಳನ್ನೂ ತನ್ನೊಡನೆ ತೆಗೆದುಕೊಂಡಿದೆ. ವಿಶದೀಕರಿಸಿ ಹೇಳಬೇಕೆಂದರೆ ಇಲ್ಲಿ ಒಂದು ಸಪಾಟಾದ ರಾಷ್ಟ್ರೀಯ ವ್ಯಕ್ತಿತ್ವದ ಸ್ಪಷ್ಟ ಗ್ರಹಿಕೆ ಇದ್ದು ಶಾಲೆಯಲ್ಲಿ ಕಲಿಸಬಹುದಾದ ಒಂದು ವಿಶಿಷ್ಟವಾದ ದೇಶೀಯ ಸಂಸ್ಕೃತಿಯ ಮೂಲಕ ಇದನ್ನು ಬೆಳೆಸಲು ಸಾಧ್ಯ ಎಂಬ ನಂಬಿಕೆ ಇದೆ.

ಶಿಕ್ಷಣದಲ್ಲಿ ರಾಷ್ಟ್ರೀಯ ಏಕತೆಯ ಗುರಿ, ಉದ್ದೇಶಗಳನ್ನು ನೀತಿ-ಯೋಜನೆಗಳಿಂದ ಅನುಷ್ಠಾನದವರೆಗೂ ಶ್ರದ್ಧೆಯಿಂದ ಒಯ್ಯಲಾಯಿತು 1984ರಲ್ಲಿ NCERTಯು ರಾಷ್ಟ್ರೀಯ ಪಠ್ಯಕ್ರಮಕ್ಕೊಂದು ಚೌಕಟ್ಟು ಕೊಡುವ ಪ್ರಕ್ರಿಯೆಯನ್ನು ಕೈಗೊಂಡಿತು.

NCERTಯ ಚಾಲನಾಸಮಿತಿಯ ವಿಚಾರಮಂಥನದ ಫಲವಾಗಿ ಒಂದು ರಾಷ್ಟ್ರೀಯ ಸೆಮಿನಾರು ಹಾಗೂ ನಾಲ್ಕು ಪ್ರಾದೇಶಿಕ ಸೆಮಿನಾರುಗಳ ನಂತರ ಬಂದ ವರದಿಯೇ 'ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣಕ್ಕಾಗಿ ಒಂದು ನೆಲೆಗಟ್ಟು". ಹೀಗೆ ರೂಪಿತವಾದ ಅಂತಿಮ ಯೋಜನೆಯು 'ರಾಷ್ಟ್ರದ ಸಮಗ್ರತೆ ಮತ್ತು ಏಕತೆಗಳನ್ನು ದೃಢೀಕರಿಸುವಲ್ಲಿ, ಹೆಚ್ಚಿಸುವಲ್ಲಿ ಶಿಕ್ಷಣದ ಪಾತ್ರ'ಕ್ಕೆ ಹೆಚ್ಚು ಒತ್ತು ನೀಡಿತು. ವರದಿಯ ಹೇಳಿಕೆಯಂತೆ

> "ನಮ್ಮ ಚರಿತ್ರೆಯ ಪ್ರಸ್ತುತ ಸಂದರ್ಭದಲ್ಲಿ ಅತ್ಯಂತ ಜರೂರಿನ ಅಗತ್ಯವೆಂದರೆ ಒಂದು ರಾಷ್ಟ್ರೀಯ ವ್ಯಕ್ತಿತ್ವ ಮತ್ತು ರಾಷ್ಟ್ರೀಯ ಚೈತನ್ಯವನ್ನು ಪ್ರಜ್ಞಾಪೂರ್ವಕವಾಗಿ ಬೆಳೆಸುವುದು. ಶಿಕ್ಷಣವು ಸಾಮಾಜಿಕ ಪರಿವರ್ತನೆಯ ಸಾಧನವೂ ಆಗಿರುವುದರಿಂದ ಅದರ ಫಲಾನುಭವಿಗಳೂ ಮತ್ತು ಉತ್ಪನ್ನಗಳೂ ಈ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರದರ್ಶಿಸುವುದನ್ನು ಶಿಕ್ಷಣವು ಖಾತರಿ ಮಾಡಬೇಕು. ಏಕೆಂದರೆ ರಾಷ್ಟ್ರೀಯ ವ್ಯಕ್ತಿತ್ವ ಮತ್ತು ರಾಷ್ಟ್ರೀಯ ಚೈತನ್ಯಗಳು ರಾಷ್ಟ್ರದ ಏಕತೆಗೆ ಅಗತ್ಯವೆಂದು ಪರಿಗಣಿತವಾಗಿವೆ." [8]

{ರಾಷ್ಟ್ರೀಯ ಎಂಬ ಪದವು ಎರಡೇ ವಾಕ್ಯದಲ್ಲಿ ಆರು ಬಾರಿ ಬಂದಿರುವ ವಾಕ್ಯ ಶೈಲಿಯನ್ನು ಗಮನಿಸಿ.} ಪುನರುಕ್ತಿಯಷ್ಟೇ ಅಲ್ಲದೇ ತಳಸ್ತರದಲ್ಲಿ ಅನುಷ್ಠಾನ ಮಾಡಲು ಪಠ್ಯಕ್ರಮಕ್ಕೊಂದು ಚೌಕಟ್ಟು ನೀಡುವುದರಿಂದ ಈ ವರದಿಯು ಸಾಮಾನ್ಯ ನೀತಿಯ ಅರ್ಥ ಮೀರಿ ತನ್ನ ಛಾಪು ಬೀರುತ್ತದೆ. ಪಠ್ಯಪುಸ್ತಕಗಳ ರಚನೆಯಲ್ಲಿ ಇದರ ಗುರಿಗಳು ಎದ್ದುಕಾಣುವಂತೆ ನಿರಂತರವಾಗಿ ಪರಿಣಾಮ ಬೀರಿದೆ. ಉತ್ತರ ಪ್ರದೇಶದ ಇಂಗ್ಲಿಷ್ ಪಠ್ಯ ಒಂದರಲ್ಲಿ ಅದರ ಪಾಠಗಳ ಆಯ್ಕೆಯ ಹಿಂದಿನ ಕಾರಣಗಳನ್ನು ವಿವರಿಸುತ್ತಾ ಇದನ್ನು ಉದ್ಧರಿಸಲಾಗಿದೆ. ಈ ಪಠ್ಯವು NCERTಯ ಈ ವರದಿಗಿಂತ ಮುಂಚಿತವಾಗಿ 1976ರಲ್ಲಿಯೇ ರಚಿತವಾಗಿದ್ದರೂ ಇವುಗಳ ಉದ್ದೇಶಗಳು ಸಮಾನ ಧೋರಣೆಯವು. ಆ ಪಠ್ಯದ ಮುನ್ನುಡಿ ಹೇಳುತ್ತದೆ:

> "ವಿಷಯಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಮತ್ತು ಪಠ್ಯಕ್ಕೆ ಹೊಂದಿಸಿಕೊಳ್ಳುವಾಗ ಉತ್ತಮವಾದ ಓದುವ ಸಾಮಗ್ರಿಯನ್ನು ಕೊಡುವ ಪ್ರಯತ್ನ ಮಾಡಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳು ಉನ್ನತ ಮಾನವೀಯ ಮೌಲ್ಯಗಳಾದ ಕರ್ತವ್ಯನಿಷ್ಠೆ, ಸ್ವಾರ್ಥ ರಹಿತ ಸೇವಾ ಮನೋಭಾವ, ಸೌಶೀಲ್ಯ, ಸಾಹಸ ಪ್ರವೃತ್ತಿ, ಮತ್ತು ದೇಶಭಕ್ತಿಗಳನ್ನು ಈ ಓದಿನ ಮೂಲಕ ಸಹಜವಾಗಿ ಮೈಗೂಡಿಸಿಕೊಳ್ಳುತ್ತಾರೆ. ತನ್ಮೂಲಕ ಅವರು ತಾಯ್ನಾಡಿನ ಮಾದರಿ ನಾಗರಿಕರಾಗಿ ರೂಪುಗೊಳ್ಳಲು ಸಹಾಯಕವಾಗುತ್ತದೆ." [9]

## III

ಶಾಲೆಗಳಲ್ಲಿ ಏನನ್ನು ನಿಜವಾಗಿ ಓದುತ್ತಾರೋ, ಏನನ್ನು ಕಲಿಯುತ್ತಾರೋ ಅಂತಹಾ ಪಠ್ಯಪುಸ್ತಕಗಳತ್ತಲೇ ನಾವೀಗ ಗಮನ ಹರಿಸೋಣ. ಈ 'ನಾಗರಿಕನಾಗುವ ಪ್ರಜ್ಞೆ'ಯನ್ನು ಹೇಗೆ ಗ್ರಹಿಸಲಾಗಿದೆ, ಅದು ಯಾರನ್ನು ಸಬಲಗೊಳಿಸುತ್ತದೆ, ಯಾರ ಬಾಯಿ ಮುಚ್ಚಿಸುತ್ತದೆ, ಅದು ಚರಿತ್ರೆ –ಪುರಾಣಗಳ, ಭ್ರಮೆ-ವಾಸ್ತವಗಳ ಮೂಲಕ ಏನು ಉಪಯೋಗ ಮಾಡಿಕೊಂಡಿದೆ ಎಂದು ಪರಿಶೀಲಿಸುವುದು ಮುಖ್ಯ ಸಂಗತಿ. ದೇಶದ ಪಠ್ಯಲೇಖನ ಸಮಿತಿಯಾದ NCERT ಮತ್ತು ಬೇರೆಬೇರೆ ರಾಜ್ಯಗಳ SCERTಗಳೆಲ್ಲದರ ಪಠ್ಯಗಳನ್ನು ಗಮನಿಸಿದರೆ ಹೆಚ್ಚಿನ ಈ ಎಲ್ಲ ಪ್ರಶ್ನೆಗಳಿಗೆ ಒಂದೇ ಮಾದರಿಯ ಉತ್ತರ ಕಾಣಸಿಗುತ್ತವೆ ಎಂಬುದು ಅಚ್ಚರಿಯ ಸಂಗತಿ. NCERT ಮತ್ತು ಉತ್ತರ ಪ್ರದೇಶ ಅಥವಾ ಕೇರಳ ರಾಜ್ಯಗಳು ಹೊರತಂದಿರುವ ಮೂರು ಬೇರೆ

ಬೇರೆ ಪಠ್ಯಪುಸ್ತಕಗಳು ಭಾರತ ಎಂದರೆ ಏನು ಅದರ ನಾಗರಿಕನಾಗುವುದು ಎಂದರೇನು ಎಂದು ವಿವರಣೆಗಳನ್ನು ನೀಡುವಾಗ ಕೆಲವು ವಿಷಯಗಳು ಸಾಮಾನ್ಯವಾಗಿ ಪುನರಾವರ್ತಿಸಿ ಒಳಸತ್ವ ಸೂಚಿಸುತ್ತವೆ,

## ವಿವಿಧತೆಯಲ್ಲಿ ಏಕತೆ

ವಸಾಹತೋತ್ತರ ಭಾರತದ ಅಸ್ಮಿತೆಯ ಪ್ರಭಾವೀ ಅಂಶಗಳಲ್ಲೊಂದು ಅದರ ಸಾಂಸ್ಕೃತಿಕ ವಿವಿಧತೆ ಮತ್ತು ಪ್ರಾದೇಶಿಕ ಭಿನ್ನತೆಗಳನ್ನು ಮುಕ್ತವಾಗಿ ಚಿತ್ರಿಸುವುದು. ಇದನ್ನು ವೈಭವೀಕರಿಸುತ್ತಲೇ ಅಹಿತಕರ ರೀತಿಯಲ್ಲಿ ಚಿಂತನಾ ಧಾಟಿಯನ್ನು ಒಡೆಯಲಾಗಿದೆ. ವಿವಿಧತೆಯನ್ನು ವೈಭವೀಕರಿಸುವಾಗ ಅದು ಭಾರತಕ್ಕೆ ನೀಡುವ ಅನನ್ಯತೆಯನ್ನು ಮತ್ತು ಅದರ ಮೌಲ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸುವ ರೂಪುರೇಷೆಗಳನ್ನು ರಚಿಸಲು ಪ್ರಯತ್ನ ಪಡಲಾಗಿದೆ. ಸ್ವಾತಂತ್ರ್ಯಾನಂತರ ರೂಪಿತವಾದ ಎಲ್ಲ ಶಿಕ್ಷಣವರದಿಗಳೂ ರಾಷ್ಟ್ರೀಯ ಏಕತೆಯನ್ನು ವೈಭವೀಕರಿಸಲು ಭಾರತದ ಸಂಸ್ಕೃತಿ-ಪರಂಪರೆಗಳ ಶ್ರೀಮಂತಿಕೆಗೆ ವಿದ್ಯಾರ್ಥಿಗಳ ಮನಸ್ಸನ್ನು ತಿರುಗಿಸುವುದು ಹೇಗೆ ಎಂಬ ಒಂದು ಭಾಗವನ್ನು ಹೊಂದಿವೆ. ಉದಾಹರಣೆಗೆ ಕೇರಳ ರಾಜ್ಯ ಸರ್ಕಾರ ರಚಿಸಿರುವ ಇಂಗ್ಲಿಷ್ ಪಠ್ಯಪುಸ್ತಕಗಳೆಲ್ಲದರ ಮೊದಲ ಪುಟದಲ್ಲೇ ಒಂದು ರಾಷ್ಟ್ರೀಯ ಪ್ರತಿಜ್ಞೆ ಮುದ್ರಿತವಾಗಿದೆ. ಮಕ್ಕಳು ಅವರ ಪ್ರಾರಂಭಿಕ ಶಾಲಾ ಜೀವನದಲ್ಲೇ "ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಹಾಗೂ ಅದರ ಪರಂಪರೆಯ ವೈವಿಧ್ಯ ಮತ್ತು ಶ್ರೀಮಂತಿಕೆಗಳ ಬಗ್ಗೆ ಹೆಮ್ಮೆ ಪಡುತ್ತೇನೆ." ಎಂದು ಹೇಳಲು ಕಲಿಯುತ್ತಾರೆ.

ಈ ಬಗೆಯ 'ರಾಷ್ಟ್ರ ನಿರ್ಮಾಣ'ವು ಬಗೆಬಗೆಯ ಪಠ್ಯಪುಸ್ತಕಗಳಲ್ಲಿ ಪ್ರಬಲವಾಗಿ ಪ್ರತಿಫಲಿತವಾಗಿದೆ. ಉದಾಹರಣೆಗೆ ಉತ್ತರಪ್ರದೇಶದ ಪಠ್ಯಪುಸ್ತಕ ಗಮನಿಸೋಣ. - ಬಂಗಾಳದ ಸೀಮಾ, ಪಂಜಾಬಿನ ಶಮಾ ಮತ್ತು ಮದ್ರಾಸಿನ ಸೋನಿಯಾ ಒಂದೇ ಕೋಣೆಯನ್ನು ಹಂಚಿಕೊಂಡು ವಾಸಿಸುತ್ತಾರೆ. ಅವರ ವ್ಯಕ್ತಿತ್ವಗಳಲ್ಲಿ ಪ್ರಜ್ಞಾಪೂರ್ವಕವಾಗಿಯೇ ರೂಢಮಾದರಿಯಲ್ಲಿ ವ್ಯತ್ಯಾಸ ಗುರುತಿಸಲಾಗಿದೆ; ಹಾಗಿದ್ದರೂ ರಾಷ್ಟ್ರೀಯ ಸಮಗ್ರತೆಯಿಂದಾಗಿ ಒದಗುವ ಸಂತಸವನ್ನು ಅವರ ಸ್ನೇಹವು ಬಿಂಬಿಸುತ್ತದೆ. "ಸೀಮಾ ಬಂಗಾಳದ ಹುಡುಗಿ; ಅವಳ ಕೂದಲು ಉದ್ದ, ಅವಳ ಕಣ್ಣು ಅಗಲವಾಗಿ ಕಪ್ಪಗೆ ಹೊಳೆಯುತ್ತದೆ. ಶಮಾ ಪಂಜಾಬಿನವಳು; ಅವಳು ತುಂಬಾ ಸುಂದರ ಹುಡುಗಿ, ಅವಳ ಕಣ್ಣು ಕೂದಲುಗಳು ಕಂದುಬಣ್ಣ. ಸೋನಿಯಾ ಮದ್ರಾಸಿನವಳು; ಅವಳ ಕೂದಲು ಕಪ್ಪಗೆ, ಗುಂಗುರಾಗಿ ಇವೆ. ಕಣ್ಣುಗಳು ಕೃಷ್ಣವರ್ಣದವು.' [10]

ತನ್ನ ಸಾಂಸ್ಕೃತಿಕ ವಿವಿಧತೆಯಿಂದಲೇ ತನ್ನನ್ನು ವಿಶದೀಕರಿಸುವ, ಮಂಡಿಸುವ ದೇಶವನ್ನು ಗ್ರಹಿಸಲು ಪ್ರಯತ್ನ ಪಡುತ್ತಾ ಪಠ್ಯಪುಸ್ತಕಗಳು ವಿಭಿನ್ನ ಧ್ವನಿಗಳಿಗೆ ಸ್ಥಳ ಒದಗಿಸಲು ಸ್ಪಷ್ಟ ಪ್ರಯತ್ನ ಮಾಡಿವೆ. ಈ ಪಠ್ಯ ಪುಸ್ತಕಗಳು ಬಳಸುವ ಓಲಾಟ ಇನ್ನೊಂದು ಪರಿಕಲ್ಪನೆ. ಸಾಂಸ್ಕೃತಿಕ ರಾಷ್ಟ್ರೀಯತೆಯು ದೇಶದ ಸತ್ವವನ್ನು ಅದರ ನಿರ್ದಿಷ್ಟ ನಾಗರಿಕತೆಯಲ್ಲಿ ಕಾಣುತ್ತಾ ಇಲ್ಲಿರುವ ಪ್ರಾದೇಶಿಕ, ಧಾರ್ಮಿಕ, ವೃತ್ತಿ ಆಧಾರಿತ ಸ್ವಾಭಾವಿಕ ಪಂಗಡಗಳನ್ನು ಗೌರವಿಸಬೇಕೆಂದೂ ವಿವಿಧತೆ, ಭಿನ್ನತೆಗಳೇ ರಾಷ್ಟ್ರದ ಸೃಜನಶೀಲತೆಯ ಚಾಲಕ ಶಕ್ತಿ ಎಂದೂ ಈ ಪಠ್ಯಗಳು ನಂಬುತ್ತವೆ. ಪ್ರಾದೇಶಿಕ, ಧಾರ್ಮಿಕ, ಮತ್ತು ಸಾಮಾಜಿಕ ಸಂಸ್ಕೃತಿಗಳಲ್ಲಿ ಇಷ್ಟೊಂದು ಭಿನ್ನತೆಗಳಿರುವ ಈ ದೇಶದಲ್ಲಿ ರಾಷ್ಟ್ರವನ್ನು ನಿರೂಪಿಸುವುದು ತುಂಬಾ ಮುಖ್ಯವಾದ ವಿವೇಕಪೂರ್ಣಪ್ರೇರಣೆ ಎನಿಸುತ್ತದೆ. [11]

ಆದರೂ ಪಠ್ಯಪುಸ್ತಕಗಳು ಈ ಮೇಲಿನ ಎಲ್ಲ ಅಂಶಗಳನ್ನೂ ತೀವ್ರವಾಗಿ ಒಳಗೊಂಡಿರುವುದಿಲ್ಲ. ಸಾಂಸ್ಕೃತಿಕ ವಿವಿಧತೆಯಿದ್ದೂ ಸಂಯುಕ್ತ ಗಣರಾಜ್ಯವಾಗುವ ನಮ್ಮ ಮೂಲಕಲ್ಪನೆಯಲ್ಲೇ ಮೂಲಭೂತವಾಗಿ ಇರುವ ತಪ್ಪುಗ್ರಹಿಕೆಯ ಅಸಂತುಷ್ಟಿಯಿಂದಾಗಿ  ಸಾಂಸ್ಕೃತಿಕ ಭಿನ್ನತೆಯ, ವಿವಿಧತೆಯ ಜೀವಂತ ಪ್ರಜ್ಞೆಯನ್ನು ಮೂಡಿಸಲು ಅವು ವಿಫಲವಾಗಿವೆ. ಭಾರತದ ಆತ್ಮವೇನು. ಭಾರತವನ್ನು ರೂಪಿಸುವ ಅಂಶಗಳೇನು ಎಂಬ ಕಲ್ಪನೆಯಲ್ಲಿರುವ ವೈರುಧ್ಯಗಳು ತೀವ್ರ ಕಳವಳಕಾರಿ. ದೇಶವೆಂದರೆ ಏಕಭಾಷಿಕ, ಏಕಸೂತ್ರದ ಸಂಸ್ಕೃತಿಯದು ಎಂದು ಸಾಂಪ್ರದಾಯಿಕವಾಗಿ ನಂಬಿರುವ ಏಕೀಕರಣ ಬಯಸುವ ವಸಾಹತುಶಾಹಿ ಪಾಶ್ಚಾತ್ಯಕಲ್ಪನೆಯ ಒಳತೋಟಿಗಳೊಡನೆ ವಸಾಹತೋತ್ತರ ವಿವಿಧತೆಯ ವಿಕೇಂದ್ರೀಕರಣದ ವ್ಯಕ್ತಿತ್ವವು ಸೆಣಸುತ್ತದೆ.  ಇದರಿಂದಾಗಿ ಒಂದೆಡೆ ನಮ್ಮ ಸಂಸ್ಕೃತಿಯ ವಿವಿಧತೆಯನ್ನು ಒಪ್ಪುವ, ಅಪ್ಪುವ, ಸಂಭ್ರಮಿಸುವ ಮನಸ್ಥಿತಿ ಇದ್ದರೆ ಇನ್ನೊಂದೆಡೆ ಈ ವ್ಯತ್ಯಾಸಗಳನ್ನು ಅಂಚಿಗೆ ತಳ್ಳುವ, ಮಸುಕುಗೊಳಿಸುವ ವಿರುದ್ಧಾತ್ಮಕ ಪ್ರಚೋದನೆಯ ಮನಸ್ಥಿತಿ ಕಾಣುತ್ತದೆ.

ಇದರಿಂದಾಗಿ ಪ್ರಾದೇಶಿಕ ಮತ್ತು ಸಾಂಸ್ಕೃತಿಕ ವಿವಿಧತೆಗಳು ಅದರ ಮೇಲ್ಪದರದಲ್ಲಿ ಸ್ಪಷ್ಟಗೋಚರ ಅಂಶಗಳಿಗೆ ಮಾತ್ರ ಸೀಮಿತವಾಗಿದ್ದು ಅಂತಃಸ್ರೋತವಾಗಿ ಹರಿದಿಲ್ಲ. ವಿವಿಧತೆಯ ಅರಿವುದೋರುವ ಪ್ರಯತ್ನಗಳೇನೂ ನಡೆಯದೆ ಕೇವಲ ಚರ್ಮ(ಕೂದಲು)ಗಳ ಬಣ್ಣ, ಹೆಸರಿನ ವ್ಯತ್ಯಾಸಗಳಿಂದ ಮಾತ್ರ ಭಿನ್ನವಾಗಿ ರಷೀದ್, ಮನ್ ಜೀತ್, ಸೀಮಾ, ಶಮಾ ಎಲ್ಲರೂ ಒಂದೇ ರೀತಿಯ ಬದುಕು ಬಾಳುತ್ತಾ, ಒಂದೇ ಬಗೆಯ ಸಂಭ್ರಮಾಚರಣೆ ತೋರುತ್ತಾ ಎಲ್ಲರೂ ಒಟ್ಟಾಗಿ ಪ್ರಾರ್ಥಿಸಬಲ್ಲ ಒಂದೇ ದೇವತೆಯ ಪೂಜೆ ಮಾಡುತ್ತಾ ಅವರ ಹಿರಿಯರು, ಶಿಕ್ಷಕರು ಅವರಿಗಾಗಿ ರೂಪಿಸಿ ತೋರಿಸಿದ ಭಾರತದ ಬಗ್ಗೆ ಹೆಮ್ಮೆ ಪಡುತ್ತಾ ಬದುಕುವಂತೆ ತೋರುತ್ತಿದೆ.

ಸಾಂಸ್ಕೃತಿಕ ವಿವಿಧತೆಗೆ ವಾಸ್ತವತೆಯನ್ನು, ಅರ್ಥವನ್ನು ತೋರುವ ಅವರ ಭಿನ್ನ ಭಿನ್ನ ಆಚರಣೆಗಳಿಗೆ, ಅವರವರ ಪ್ರತ್ಯೇಕ ಲಕ್ಷಣಗಳಿಗೆ ಎದ್ದು ತೋರುವ ಪ್ರಾತಿನಿಧಿಕತೆಯೇ ಇಲ್ಲಿ ದೊರೆತಿಲ್ಲ.. ಸಂಸ್ಕೃತಿ ಎಂಬುದು ಲಕ್ಷಣಗಳ ವ್ಯವಸ್ಥೆಯಲ್ಲಿ ಎದ್ದು ತೋರುತ್ತದೆ. ಅದನ್ನು ಇತರರಿಗೆ ತಲುಪಿಸಲು ವಿವರಣೆಗಳು ಬೇಕಿರುತ್ತವೆ. ವಿದ್ಯಾರ್ಥಿಗಳು ಅರ್ಥ ಮಾಡಿಕೊಳ್ಳಲು, ಪರಸ್ಪರ ಹಂಚಿಕೊಳ್ಳಲು ದಟ್ಟ ವಿವರಗಳು ಬೇಕಿರುತ್ತವೆ. ಶಾಲಾಮಕ್ಕಳ ವಾಸ್ತವ ಅನುಭವದಲ್ಲೇ ಅವರ ತಿನ್ನುವ ಅಭ್ಯಾಸದಲ್ಲಿ, ಆಟಗಳಲ್ಲಿ, ಕುಟುಂಬದೊಡನೆ ಅವರ ಸಾಹಚರ್ಯ, ಕೊಡುಕೊಳ್ಳುವಿಕೆಗಳಲ್ಲಿ ಸಂಭ್ರಮ-ಉತ್ಸವಗಳಲ್ಲಿ, ವೇಷಭೂಷಣಗಳಲ್ಲಿ, ಕಾಣಸಿಗುವ ವಿವರಗಳು ಪಠ್ಯದಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಸಾಮ್ಯತೆ-ಭಿನ್ನತೆಗಳೆರಡನ್ನೂ ಒಪ್ಪಿ ಸ್ಥಿರೀಕರಿಸುವುದರಲ್ಲಿರುವ ಸಂದಿಗ್ಧವು ಬಹುಶಃ ವಸಾಹತುಶಾಹಿ ಮತ್ತು ಪೌರ್ವಾತ್ಯ ಪರಿಭಾವನೆಗಳಲ್ಲಿರುತ್ತದೆ. ಪೌರ್ವಾತ್ಯ ಭಾವನೆಯಿಂದಾಗಿ ರಾಷ್ಟ್ರೀಯತೆಯು ತನ್ನನ್ನು ತಾನೇ ನಿರೂಪಿಸಲು ಅನುವಾಗುವಂತೆ, ಪ್ರಾದೇಶಿಕತೆಯನ್ನು ಎದುರಿಸುವಂತೆ ಸ್ಥಿರವಾದ, ಏಕಸೂತ್ರದ ವ್ಯಕ್ತಿತ್ವದ ಚೌಕಟ್ಟನ್ನು ಕಟ್ಟಿಕೊಡುತ್ತದೆ. ಸಮಸಂಸ್ಕೃತಿಯ ವ್ಯಕ್ತಿತ್ವ ಮತ್ತು ನಿರಂತರತೆಯನ್ನು ಮತ್ತು ಒಂದು ಸಮಾನ ಬೌದ್ಧಿಕ ಪಾತಳಿಯನ್ನು ಹೊಂದಿರುವ  ರಾಷ್ಟ್ರವು ಏಕಸೂತ್ರದ ಸಂಸ್ಕೃತಿಯನ್ನು ಹೊಂದಿರುತ್ತದೆ ಎಂಬ ಒಂದು ಪರಿಭಾವನೆಯು ವಿವಿಧತೆಯನ್ನು ಸಂಭ್ರಮಿಸುವ ಅಗತ್ಯದ ಒಳಗೆ ಅಂತಃಸ್ರೋತವಾಗಿ ಅಡಗಿರುತ್ತದೆ.[12].

ಏಕಸೂತ್ರದ, ಸಮರೂಪತೆಯ ಪದಗಳಲ್ಲಿ ನಿರ್ದಿಷ್ಟವಾಗಿ ಹೇಳದಿದ್ದರೂ ದೇಶವೆಂದರೇನೆಂದು ನಿರೂಪಿಸಲು ಅಸಮರ್ಥರಾಗಿರುವ ಬಗ್ಗೆ ಗಾಢ ಕಳವಳದಿಂದಾಗಿ ಅನೇಕ ರೀತಿಗಳಲ್ಲಿ ಪಠ್ಯಪುಸ್ತಕಗಳಲ್ಲಿ ಗೊಂದಲಮಯ ಸಂದೇಶಗಳು ಹುಟ್ಟಿಕೊಂಡಿವೆ.

**ಸಂಕೇತವಾಗಿ ದೇಶ**

ವೈವಿಧ್ಯಮಯ ಸಾಂಸ್ಕೃತಿಕ ವ್ಯಕ್ತಿತ್ವಗಳ ಚಿತ್ರೀಕರಣಕ್ಕೆ ಸಮಾನಾಂತರವಾಗಿ ಅಷ್ಟೇ ಪ್ರಬಲವಾದ ರಮ್ಯ ಪರಿಭಾಷೆಯಲ್ಲಿ ದೇಶವೆಂದರೆ ಕೇಂದ್ರೀಕೃತವಾದ ನಿರ್ದಿಷ್ಟ ವ್ಯಕ್ತಿತ್ವ ಎಂದು ಒಂದು ಭಾಗವನ್ನಷ್ಟೇ ವಿವರಿಸಿ ಅದೇ ಪೂರ್ಣ ವ್ಯಕ್ತಿತ್ವ ಎಂದು ಮಂಡಿಸುವ ಇನ್ನೊಂದು ಚಿತ್ರೀಕರಣವೂ ಇದೆ. ಅದನ್ನು ಮಂಡಿಸುವ ಒಂದು ವಿಧಾನವೆಂದರೆ ಸಾರ್ವಜನಿಕ ಕಟ್ಟಡಗಳು ಮತ್ತು ಸ್ಮಾರಕಗಳನ್ನು ಭಾರತದ ವೈಭವ ಮತ್ತು ಭವ್ಯತೆಯ ಪ್ರತೀಕವಾಗಿ ಚಿತ್ರಿಸುವುದು. ಎರಿಕ್ ಹಾಬ್ಸ್ ಬಾಮ್ ಪ್ರತಿಪಾದಿಸುವಂತೆ, ರಾಷ್ಟ್ರ, ರಾಷ್ಟ್ರೀಯತೆ, ರಾಷ್ಟ್ರೀಯಸತ್ತೆಗಳ ಪರಿಕಲ್ಪನೆಗಳು ಸೋಷಿಯಲ್ ಇಂಜಿನಿಯರಿಂಗ್ ನ( ಸಮಾಜರೂಪಣದ) ಪ್ರಕ್ರಿಯೆಯಲ್ಲಿ ಮೂಡುತ್ತದೆ. ಆಧುನಿಕ ರಾಷ್ಟ್ರಗಳು ಸ್ವಪ್ರತಿಪಾದನೆ ಮೀರಿ ಯಾವುದೇ ವಿವರಣೆಯನ್ನು ಬಯಸದಷ್ಟು 'ಸಹಜ'ವಾಗಿ ಸಮುದಾಯದಲ್ಲಿ ಕಾಣುವಂತಹಾ ಸಂಪ್ರದಾಯಗಳನ್ನು 'ಆವಿಷ್ಕರಿಸುತ್ತವೆ'.[13] ಈ ಸ್ವಪ್ರತಿಪಾದನೆಯು ಜನಪ್ರಿಯ ಕಟ್ಟಡಗಳು, ಸ್ಮಾರಕಗಳು, ಪ್ರತಿಮೆಗಳು ಮುಂತಾದ ರಾಷ್ಟ್ರೀಯ ಚಿಹ್ನೆಗಳ ಪಾತಳಿಯ ಮೇಲೆ ರೂಪಿತವಾಗಿವೆ.

ಈ ಎಲ್ಲ ಅಂಶಗಳನ್ನು ತರಗತಿಗೆ ತರಲು ಶಾಲಾಪಠ್ಯಕ್ಕೆ ಸಾಧ್ಯವಿಲ್ಲವಾಗಿ ಅವು ಹತ್ತಿರದ ಪರ್ಯಾಯ ವಿಧಾನವನ್ನು ಅಳವಡಿಸಿಕೊಳ್ಳುತ್ತವೆ ಮತ್ತು ಈ ಎಲ್ಲವನ್ನೂ ರಾಷ್ಟ್ರೀಯತೆಯ ಪರಿಭಾಷೆಯಲ್ಲಿ ವಿವರಿಸುತ್ತವೆ. ಹಾಗಾಗಿ, ಕೇರಳದ ಒಂದು ಪಠ್ಯದಲ್ಲಿ ತಾಜ್ ಮಹಲ್ ಬಗೆಗಿನ ಒಂದು ಪಾಠವು ಅದರ ಸೌಂದರ್ಯವನ್ನೂ ರಾಷ್ಟ್ರೀಯ ಗೌರವದ ಸಂಕೇತವಾಗಿರುವ ಅದರ ವಿಶಿಷ್ಟತೆಯನ್ನೂ ಅಕ್ಕಪಕ್ಕದಲ್ಲಿಟ್ಟು ಮಂಡಿಸುತ್ತದೆ. 'ಅದರ ಸೌಂದರ್ಯವು ಸಾವಿರಾರು ಪ್ರವಾಸಿಗರನ್ನು ಭಾರತಕ್ಕೆ ಕೈ ಬೀಸಿ ಕರೆಯುತ್ತದೆ. ಪ್ರತಿ ವರ್ಷ ಜನರು ಪ್ರಪಂಚದ ಎಲ್ಲ ಭಾಗಗಳಿಂದ ಆಗ್ರಾ ಮತ್ತು ತಾಜ್ ನೋಡಲು ಬರುತ್ತಾರೆ.' [14]

ಅಂತೆಯೇ 'ಲೆಟರ್ ಫ್ರಂ ದೆಹಲಿ' ಎಂಬ ಪಾಠವು ದೇಶದ ರಾಜಧಾನಿಯ ಅನನ್ಯತೆಯನ್ನು 'ಇದೊಂದು ಪ್ರಪಂಚದ ಅತಿ ಪ್ರಾಚೀನ ಮತ್ತು ಚಾರಿತ್ರಿಕ ನಗರಗಳಲ್ಲೊಂದು' ಎಂದು ಉತ್ಸಾಹದಿಂದ ವರ್ಣಿಸಿದೆ.[15] ದೇಶದಲ್ಲಿನ ನಗರಗಳಲ್ಲಿ ಇದೊಂದನ್ನೇ ಹೀಗೆ ವೈಭವೀಕರಿಸಲಾಗಿದೆ ಎಂಬುದು ಗಮನಾರ್ಹ ವಿಷಯ. ಏಕೆಂದರೆ ದೆಹಲಿ ಕೇವಲ ನಗರವಲ್ಲ; ರಾಜಧಾನಿಯಾದ್ದರಿಂದ ಅದೇ ಭಾರತ. ಪ್ರಾಚೀನತೆ ಮತ್ತು ಆಧುನಿಕ ಪ್ರಜಾತಂತ್ರದ ಕೇಂದ್ರವಾಗಿ ಅದರ ಘನತೆಯಿಂದ ಅದರ ಪ್ರತೀಕಾತ್ಮಕ ಮೌಲ್ಯವನ್ನು ಪ್ರತಿಪಾದಿಸಲಾಗಿದೆ. ಈ ಪಾಠವು ಅನೇಕ ಅಂಶಗಳನ್ನು ಜೋಡಿಸಿ ಅದರ ವೈಭವದ ವಿಭಿನ್ನ ಆಯಾಮಗಳನ್ನು ತೆರೆದಿಡುತ್ತದೆ.-ಮಹಾಭಾರತದಲ್ಲಿ ಇದನ್ನು ಇಂದ್ರಪ್ರಸ್ಥ ಎಂದು ಹೆಸರಿಸಲಾಗಿದೆ. ಇಲ್ಲಿ ಅಶೋಕ ಸ್ಥಂಭ, ಕುತುಬ್ ಮಿನಾರ್, ಕೆಂಪುಕೋಟೆ, ಜುಮ್ಮಾ ಮಸೀದಿ, ಚಾಂದಿನಿ ಚೌಕ, ರಾಷ್ಟ್ರಪತಿ ಭವನ, ಸೆಕ್ರೆಟೇರಿಯಟ್, ಸಂಸತ್ ಭವನ, ಇಂಡಿಯಾಗೇಟ್, ಬೊಂಬೆ ಮ್ಯೂಸಿಯಂ ಇವೆ. ಇದರ ಅಂತಃಸತ್ವವಾದ ಘನತೆಯನ್ನು ಸಂಸ್ಕೃತಿಯಿಂದಷ್ಟೇ ಒತ್ತಿ ಹೇಳಿಲ್ಲ; (ಆಗ ಅದು ಕೇವಲ

ಪ್ರಾದೇಶಿಕವಾಗಿ ಮಾತ್ರ ಮುಖ್ಯವಾಗುತ್ತಿತ್ತು) ಚರಿತ್ರೆ ಮತ್ತು ಪರಂಪರೆಯಿಂದ ಬಂದ ರಾಷ್ಟ್ರೀಯ ಕಟ್ಟಡಗಳ ಮೂಲಕ ಸಂಕೇತಿಸಲಾಗಿದೆ.

ಇತರ ರಾಜ್ಯಗಳ ಪಠ್ಯಗಳಲ್ಲೂ ಭಾರತವನ್ನು ಸಾಂಕೇತಿಕವಾಗಿ ಚಿತ್ರಿಸುವುದರ ಪ್ರಾಮುಖ್ಯತೆಯನ್ನು ಗುರುತಿಸಬಹುದು. ಉದಾಹರಣೆಗೆ ಉತ್ತರಪ್ರದೇಶದ ಪಠ್ಯದಲ್ಲಿ ಹೆಸರಿನಿಂದಲೇ ಸೂಚಿತವಾಗುವಂತೆ 'ನೋ ಯುವರ್ ಕಂಟ್ರಿ' ಎಂಬ ಒಂದು ಪಾಠವಿದೆ. ಇಲ್ಲಿ ಅನೇಕ ರಾಷ್ಟ್ರೀಯ ಚಿಹ್ನೆಗಳನ್ನು ಪರಿಚಯಿಸಲಾಗಿದೆ. ಥ್ಯಾಸಿಸ್ಟ್ ಉತ್ಸಾಹದಲ್ಲಿ ಅಜ್ಜಿಯೊಬ್ಬಳು ಮೊಮ್ಮಕ್ಕಳನ್ನು ಪ್ರಶ್ನಿಸುತ್ತಾ ಹೋಗುತ್ತಾಳೆ:

> "ನಮ್ಮ ರಾಷ್ಟ್ರೀಯ ಪ್ರಾಣಿ ಯಾವುದು ಗೊತ್ತೇ?...ಅವರು ನಿಮಗೆ ನಮ್ಮ ರಾಷ್ಟ್ರಿಯ ಪಕ್ಷಿ ಯಾವುದೆಂದು ತಿಳಿಸಿದ್ದಾರೆಯೇ?...ನಮ್ಮ ರಾಷ್ಟ್ರೀಯ ಪುಷ್ಪದ ಹೆಸರು..."[16]

ಮಕ್ಕಳು ನಮ್ಮ ರಾಷ್ಟ್ರ ಧ್ವಜದ ಬಗೆಗಿನ ತಮ್ಮ ಅರಿವನ್ನು ತಿಳಿಸುವಂತೆ ತಾವು ತಾವೇ ಮುಂದಾಗಿ ಹೇಳುತ್ತಾ ಅವಳ ಓಘಕ್ಕೆ ಅಡ್ಡಿಮಾಡುತ್ತಾ ಮುಂದುವರೆಯುವ ಪಾಠವು 'ನಮ್ಮ ದೇಶ'ದ ಸ್ತುತಿಯ ಮೂಲಕ ಕೊನೆಗೊಳ್ಳುತ್ತದೆ.

> ನಮ್ಮದು ಭವ್ಯ ರಾಷ್ಟ್ರ. ಅದು ಅತಿ ಪ್ರಾಚೀನ ರಾಷ್ಟ್ರ. ಅದು ರಾಮ, ಕೃಷ್ಣ, ಬುದ್ಧ, ನಾನಕ್, ಮಹಾತ್ಮಾಗಾಂಧಿಯವರುಗಳು ನಡೆದಾಡಿದ ದೇಶ....ನನ್ನೊಂದಿಗೆ ಹೇಳಿರಿ 'ಜೈ ಹಿಂದ್'.[17]

ಅದು ಕಟ್ಟಡವಿರಲಿ, ಪಕ್ಷಿ ಇರಲಿ ಈ ಎಲ್ಲ ಸಂಕೇತಗಳ ಉದ್ದೇಶ ಒಂದೇ- ಕಾಲ ಮತ್ತು ಪ್ರಾದೇಶಿಕತೆಯ ಮಿತಿಯನ್ನು ಮೀರಿ ದೇಶವನ್ನು ಒಂದು ಅಖಂಡ ವ್ಯಕ್ತಿತ್ವವಾಗಿ ಕಟ್ಟಿಕೊಡುವುದು. ಪ್ರಪಂಚದ ಎಲ್ಲ ಮೂಲೆಗಳಿಂದಲೂ ಜನರು ತಾಜ್ ಮಹಲ್ ನೋಡಲು ಬರುತ್ತಾರೆ ಎಂಬುದಾಗಲೀ, ದೇಶದೆಲ್ಲೆಡೆಯೂ ತಾವರೆಯನ್ನು ರಾಷ್ಟ್ರಪುಷ್ಪವಾಗಿ ಭಾವಿಸುತ್ತಾರೆ ಎನ್ನುವುದೇ ಆಗಲಿ ದೇಶದ ಏಕತೆ, ಸಮಗ್ರತೆಯ ಭಾವನೆಯನ್ನು ಯಾವುದೇ ಕಾಲದಲ್ಲಿ ಬೇಕಾದರೂ ಯಾರು ಬೇಕಾದರೂ ಗುರುತಿಸಬಹುದು ಎಂದು ಸಾಧಿಸುವುದೇ ಆಗಿದೆ. ಇರಬಹುದಾದ ಪ್ರಾದೇಶಿಕ ವಿಭಿನ್ನತೆಗಳೇನೇ ಇದ್ದರೂ ಅದು ಸಮಗ್ರವಾದ ಅಸ್ಮಿತೆಯೆದುರು ತುಂಬಾ ಪುಟ್ಟ ಸಂಗತಿ ಎನಿಸಿಬಿಡುತ್ತದೆ.

### ರಾಷ್ಟ್ರವನ್ನು ಪುರಾಣಪ್ರಜ್ಞೆಯ ದ್ಯೋತಕವಾಗಿ ಬಳಸುವುದು

ಧರ್ಮಕ್ಕೆ ಸಂಬಂಧಿಸಿದ ಭಾಷೆಯನ್ನು ದೇಶದ ವ್ಯಾಖ್ಯಾನವಾಗಿ ರೂಪಾಂತರಿಸುತ್ತಾ ಬಾರತವನ್ನು ವೈಭವೀಕರಿಸಲಾಗಿದೆ.  ಈ ಪ್ರಕ್ರಿಯೆಯಲ್ಲಿ ದೇಶದ ವ್ಯಕ್ತಿತ್ವವನ್ನು ಪುರಾಣಪ್ರಜ್ಞೆಯ ದ್ಯೋತಕವಾಗಿ ಬಳಸಲಾಗಿದ್ದು, ಎಲ್ಲೆಗಳನ್ನು ಮೀರಿದ ಶಕ್ತಿಯುತ ಪ್ರತಿಮೆಯಾಗಿ ಬಳಸಲಾಗಿದೆ. ಉದಾಹರಣೆಗೆ, "ತಾಯಿ ಭಾರತಿ" ("Mother India") ಪದ್ಯದಲ್ಲಿ ದೇಶವು ದೇವತೆಯಾಗಿದ್ದು "ಕನ್ಯಾಕುಮಾರಿಯು ಅವಳ ಪವಿತ್ರ ಪಾದವಾಗಿದೆ" [18] ಹಾಗೆಯೇ ನನ್ನ ದೇಶ ('My Land') ಎಂಬ ಪದ್ಯದಲ್ಲಿ ಮಾತೃಭೂಮಿಗಾಗಿ ಹೋರಾಡುವುದು ಧರ್ಮಯುದ್ಧದ ಅನುರಣನ ಎಂಬಂತೆ ಧ್ವನಿತವಾಗಿದೆ:

> No men than hers are braver!
>
> Her women's hearts never waver

I'd freely die to save her

And think my lot divine.

ಈ ತಾಯ್ನಾಡಿನ ಪುರುಷರಿಗಿಂತಲೂ ಶೂರರು ಬೇರಿಲ್ಲ.

ಇಲ್ಲಿನ ಸ್ತ್ರೀಯರ ಹೃದಯಗಳೆಂದಿಗೂ ಚಂಚಲವೇ ಅಲ್ಲ.

ಅವಳನ್ನುಳಿಸಲು ಸಾಯಲೂ ಸಿದ್ಧ ನಾನು

ನಮ್ಮವರೆಲ್ಲರೂ ದೈವಾಂಶರೆನ್ನುವವನು" [19]

'ರಾಷ್ಟ್ರದ ಬಲ' ('A Nation's Strength') ಎಂಬ ಇನ್ನೊಂದು ಪದ್ಯದಲ್ಲಿ ಶೌರ್ಯ ಮತ್ತು ರಾಷ್ಟ್ರಭಕ್ತಿಯ ವೈಭವವನ್ನು ಒತ್ತಿಹೇಳಲಾಗಿದೆ.

'Not gold, but only man can make
A people great and strong
Men who for truth and honour's sake
Stand fast and suffer long.' [20]

"ಚಿನ್ನದಿಂದಲ್ಲ, ರಾಷ್ಟ್ರದ ಉನ್ನತಿ-ವೈಭವ,

ಮನುಜರಿಂದ

ಸತ್ಯಕಾಗಿ, ರಾಷ್ಟ್ರಗೌರವಕಾಗಿ ನಿಲ್ಲಬಲ್ಲವರಿಂದ,

ಸತತ ಕಷ್ಟ ಸಹಿಸುವವರಿಂದ"

ರಾಷ್ಟ್ರದ ವೈಭವೀಕರಣಕ್ಕೆ ಪಠ್ಯದ ಕವಿತೆಯ ವಿಭಾಗದ ಪುಟಗಳಲ್ಲಿ ಬಹುತೇಕ ಭಾಗ ಮೀಸಲಾಗಿದೆ ಎಂಬುದು ಆಸಕ್ತಿಕರ ಸಂಗತಿ. ಕವಿತೆಯು ಅಂತಹಾ ಪೂಜ್ಯ ಭಾವನೆಯನ್ನು ಉದ್ದೀಪಿಸಲು ಬಹಳ ಪರಿಣಾಮಕಾರಿ ಮಾಧ್ಯಮ. ಪ್ರಾಸ, ಛಂದಸ್ಸುಗಳಿಂದ ವಿಮರ್ಶಾತೀತವಾದ, ಸಮ್ಮೋಹಕವಾದ ಒಂದು ಹತ್ತಿಕ್ಕಲಾಗದ ಭಾವನಾತ್ಮಕತೆಯನ್ನು ಜಾಗೃತಗೊಳಿಸುತ್ತದೆ. ಈ ಅನುಭವಾತೀತ ಮೊರೆಯು ದೇಶದ ವ್ಯಕ್ತಿತ್ವವನ್ನು ಅದರ ವಾಸ್ತವ ಅಸ್ತಿತ್ವಕ್ಕಿಂತಾ ಮಿಗಿಲಾದ ಸ್ತರಕ್ಕೊಯ್ಯುತ್ತದೆ. ಇದರಿಂದಾಗಿ ಪ್ರಬಲವಾಗಿ ಅಖಂಡ ವ್ಯಕ್ತಿತ್ವವುಳ್ಳ ದೇಶವನ್ನು ಸೂಚ್ಯವಾಗಿ ರೂಪಿಸುವುದೇ ಅಲ್ಲದೇ ಅದನ್ನು ನೈತಿಕ ವಿಮರ್ಶೆಗೆ ಮೀರಿದ ಆಯಾಮದಲ್ಲಿ ಮಂಡಿಸುತ್ತದೆ.

**IV**

ದೇಶವನ್ನು ವ್ಯಾಖ್ಯಾನಿಸುವ ರೀತಿಗಳಲ್ಲಿ ಒಂದು ರೀತಿ ಎಂದರೆ ಪುರಾಣಪ್ರಜ್ಞೆಯಲ್ಲಿ ಮತ್ತು ಸಂಕೇತಗಳಲ್ಲಿ ದೇಶವನ್ನು ಮತ್ತು ಅದರ ವ್ಯಕ್ತಿತ್ವವನ್ನು ಕಂಡರಸುವುದು. ಇನ್ನೊಂದು ಬಗೆ ಎಂದರೆ ನಿರ್ದಿಷ್ಟ ಬಗೆಯಲ್ಲಿ ಅಲ್ಲಿನ ಜನಗಳು,ಅವರ ಆರ್ಥಿಕತೆ, ಅವರ ನಿತ್ಯಜೀವನಗಳನ್ನು ಕಟ್ಟಿಕೊಡುವುದು. ಶಾಲಾ ಪಠ್ಯಪುಸ್ತಕದಲ್ಲಿ ಸಮಾಜವನ್ನು ಕಟ್ಟಿಕೊಡುವ ಕಲ್ಪನೆಯ ಹಿಂದಿರುವ

ಆಶಯವೇ ಅನುಕರಣೆಗೆ ಮಾದರಿಯನ್ನು ನೀಡುವುದು. 'ಸಾಮಾನ್ಯ' ಸಮಾಜದ ಅಳತೆಗೋಲುಗಳನ್ನು ಹೇಳುತ್ತಾ ಆ ಪಠ್ಯಗಳು ಸಾಮಾಜಿಕ ರೀತಿನೀತಿಯನ್ನು, ಅಧಿಕಾರವು ನಿಜವಾಗಿ ಯಾರ ಕೈಯಲ್ಲಿರಬೇಕೆಂಬುದನ್ನು ಸೂಚಿಸುತ್ತವೆ ಮತ್ತು ನಾಗರಿಕರ ಸ್ವಭಾವಗಳನ್ನು ರೂಪಿಸುತ್ತವೆ.

## ಸಮಾಜ ವ್ಯವಸ್ಥೆ

ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳು ಆಯಾ ಸಮಾಜದ ಕನ್ನಡಿಗಳಿದ್ದಂತೆ [21] ಎಂದು ಗ್ರಹಿಸಿದರೆ, ಎಲ್ಲ ಪಠ್ಯಗಳಲ್ಲೂ ಬಂಡವಾಳಶಾಹಿ ಸಮಾಜದ ಪರಿಕಲ್ಪನೆ ಇರುವುದು ಅನಿರೀಕ್ಷಿತವಲ್ಲ ಎನ್ನಬಹುದು. ಎಲ್ಲ ಆಳುವ ವರ್ಗವೂ ರಾಜರಿರಲಿ, ಈಗಿನ ಆಧುನಿಕ ಅಧಿಕಾರವರ್ಗವಿರಲಿ, ಅದು ಕರುಣಾಳು ಎಂದೂ, ಸಹಸ್ಪಂದಿ ಎಂದೂ, ಉದಾತ್ತವಾದದ್ದೆಂದೂ ಕಟ್ಟಿಕೊಡುತ್ತಾ- ಸಮಾಜದಲ್ಲಿ ಅಧಿಕಾರದ ತಾರತಮ್ಯಗಳು ಸ್ವಾಭಾವಿಕ ಮತ್ತು ಅನಿವಾರ್ಯ ಎಂದು ಗ್ರಹಿಸುವಂತೆ ಮಾಡುತ್ತವೆ. ಕೇರಳ ರಾಜ್ಯದ ಪಠ್ಯಪುಸ್ತಕದಲ್ಲಿನ ಕತೆಯೊಂದು ಇದನ್ನು ಉತ್ತಮವಾಗಿ ನಮ್ಮ ಗ್ರಹಿಕೆಗೆ ತರುತ್ತದೆ. 'ಕೋತಿಗಳು ಮತ್ತು ಸಾಧು' ಎಂಬ ಕತೆಯಲ್ಲಿ ಕೋತಿಗಳ ಗುಂಪಿನಲ್ಲಿ 'ಒಬ್ಬ ರಾಜ ಕೋತಿ, ಒಂದು ರಾಣಿ ಕೋತಿ, ಒಂದು ಮಂತ್ರಿ ಮತ್ತು ಸೇನಾಪತಿ ಕೋತಿಗಳಿದ್ದವು' [22] ಎಂದು ಲೇಖಕರು ಹೇಳುತ್ತಿರುವುದು ಸಮಾಜವ್ಯವಸ್ಥೆಯಲ್ಲಿ ಸ್ತರಗಳು ಸಹಜ ಮತ್ತು ಸಾರ್ವಕಾಲಿಕ ಎಂದು ಸೂಚಿಸುತ್ತದೆ.

ಅನೇಕ ಪಾಠಗಳು ಭೂತಕಾಲದ ಸನ್ನಿವೇಶಗಳಲ್ಲೇ ರೂಪಿತವಾಗಿದ್ದು ರಾಜ-ರಾಣಿಯರು ಅವರ ಪರಮೋಚ್ಚ ಅಧಿಕಾರವನ್ನು ಕರುಣಾಪೂರ್ಣವಾಗಿ ಚಲಾಯಿಸುತ್ತಿದ್ದರೆಂದು ಮತ್ತೆ ಮತ್ತೆ ಪುನರುಚ್ಚರಿಸುತ್ತದೆ. ಈ ಪರಮೋಚ್ಚ ಅಧಿಕಾರವೇ ಪ್ರಾಮಾಣಿಕ ನ್ಯಾಯವಿಚಕ್ಷಣೆಗೆ ಇರುವ ಏಕಮೇವ ದಾರಿ ಎಂದು ಸಂಭ್ರಮಿಸುವ ಅಂತರಾರ್ಥ ಬರುವಂತೆ ಪಾಠಗಳು ರೂಪಿತವಾಗಿವೆ. ಚರಿತ್ರೆಯ ಹಾದಿಯಲ್ಲಿ ಇಷ್ಟೊಂದು ಕತೆಗಳಿರುವುದು ಖಂಡಿತವಾಗಿ ಆಕಸ್ಮಿಕವೂ ಅಲ್ಲ; ಕಳೆದುಹೋದ ರಮ್ಯಯುಗದ ವಿಚಾರರಹಿತ ಸಂಭ್ರಮವೂ ಅಲ್ಲ. ಆ ಹಿಂದಿನ ದಿನಗಳಲ್ಲಿ ಸಾರ್ವಭೌಮ ಅಧಿಕಾರದ ಕೇಂದ್ರ ರಾಜರಲ್ಲಿ ಸ್ಪಷ್ಟವಾಗಿ ಕಾಣುತ್ತಿತ್ತು ಮತ್ತು ಅದು ಸಹಜವಾಗಿ ಒಪ್ಪಿತವಾಗಿತ್ತು. ರಾಜರ ಮಧ್ಯಸ್ತಿಕೆ, ಸಕ್ರಿಯ ಒಳಗೊಳ್ಳುವಿಕೆ, ತೀರ್ಪುಗಳಿಂದ ನ್ಯಾಯದಾನದ ಪರಿಯನ್ನು ಚಿತ್ರಿಸುವುದು ಸುಲಭ, ಸಹಜ ಮತ್ತು ಈಗಿನ ಸುತ್ತುಬಳಸು ಮಾದರಿಯ, ಸುಲಭವಾಗಿ ದಕ್ಕದಷ್ಟು ಹರಡಿಹೋದ ಸಮಕಾಲೀನ ಸರ್ಕಾರಿ ವಿಭಾಗಗಳ ಮೂಲಕ ಚಿತ್ರಿಸುವುದಕ್ಕಿಂತಾ ತುಂಬಾ ಸರಳ ವಿಷಯವಾಗುತ್ತದೆ. [23] ಹೀಗೆ ಚಿತ್ರಿಸುವ ಪ್ರಕ್ರಿಯೆಯ ಮೂಲಕ ಎಲ್ಲರೂ ಅಧಿಕಾರಶಾಹಿಯ/ಪ್ರಭುತ್ವದ ಪ್ರಾಬಲ್ಯವನ್ನು ಒಪ್ಪಿಕೊಳ್ಳುವಂತೆ, ಅಷ್ಟೇ ಏಕೆ ಬೇಕೇಬೇಕೆಂಬಷ್ಟು ಅನಿವಾರ್ಯತೆಯಿಂದ ಬಯಸುವಂತೆ ಕೂಡಾ ಮಾಡುತ್ತದೆ.

ಉದಾಹರಣೆಗೆ ಉತ್ತರ ಪ್ರದೇಶದ ಪಠ್ಯಪುಸ್ತಕದಲ್ಲಿನ ಪಾಠಗಳನ್ನು ಗಮನಿಸೋಣ. ಇಂಗ್ಲಿಷ್ ಪಠ್ಯದಲ್ಲಿ 'ದಯಾಳು ರಾಜಕುಮಾರ', 'ಸಾಲೊಮನ್ನನ ನ್ಯಾಯ', 'ರಾಜನ ತೀರ್ಪು' ಮುಂತಾದ ಶೀರ್ಷಿಕೆಗಳಿವೆ. ಅಲ್ಲಿ ಆಳುವ ದೊರೆಯಾಗಿ ರಾಜ ಮಾತ್ರ ಸತ್ಯಪಾಲನೆ ಮಾಡುವ ಸಾಮರ್ಥ್ಯವನ್ನು, ನ್ಯಾಯದಾನದ ಅರ್ಹತೆಯನ್ನು ಉಳ್ಳವನಾಗಿರುತ್ತಾನೆ. ಅಂತೆಯೇ ಪ್ರಜೆಗಳ ಹಿತಕ್ಕಾಗಿ ಎಲ್ಲರನ್ನೂ ಹುರಿದುಂಬಿಸುವವನೂ ರಾಜನೇ. [24]

ಇದೇ ಮಾದರಿಯ ಪಾಠಗಳೇ NCERT ಪಠ್ಯದಲ್ಲಿವೆ. 'ನ್ಯಾಯಪರ ರಾಜ' ('the righteous king') ಪಾಠದಲ್ಲಿ ಬರುವ ರಾಜನ ತೊಂದರೆ ಎಂದರೆ ಅವನಲ್ಲಿ ತಪ್ಪೇ ಇರುವುದಿಲ್ಲ[25] ಅವನು ಮಾರುವೇಷದಲ್ಲಿ ರಾಜ್ಯವನ್ನೆಲ್ಲಾ ಸುತ್ತಾಡಿದರೂ ಅವನ ಬುದ್ಧಿವಂತಿಕೆ, ಹಿರಿಮೆಗಳ ಬಗ್ಗೆ ಹೊಗಳಿಕೆ ಬಿಟ್ಟು ಬೇರೇನೂ ಕೇಳಿ ಬರುವುದಿಲ್ಲ. ಅಂತೆಯೇ 'ರಾಜನ ಆಯ್ಕೆ' ಪಾಠದಲ್ಲಿ ರಾಜನ ಆಸ್ಥಾನಿಕರು ಅವನಿಗೆ ಚಳ್ಳೆಹಣ್ಣು ತಿನ್ನಿಸಲು ಪಿತೂರಿ ಮಾಡಿದಾಗ ಅವರ ಪಿತೂರಿ ಪತ್ತೆ ಹಚ್ಚುವ, ಅವನ ಆಸ್ಥಾನಿಕರಲ್ಲಿ ಯಾರು ನಿಷ್ಠಾವಂತ ಎಂದು ಪತ್ತೆ ಹಚ್ಚುವ ಸಾಮರ್ಥ್ಯ, ಅವನನ್ನು ಬಳಸಿಕೊಳ್ಳುವ ಸಮಯಪ್ರಜ್ಞೆ ರಾಜನಿಗಿರುತ್ತದೆ.[26] ಅನೇಕ ಪುಸ್ತಕಗಳಲ್ಲಿ ಅಡಕವಾಗಿರುವ 'ಶಿಬಿರಾಜನ ಕತೆ' ಪಾಠದಲ್ಲಿ ದಯೆ, ನ್ಯಾಯಗಳ ಪರಾಕಾಷ್ಠೆಯ ರಾಜನು ನ್ಯಾಯ ಕರುಣೆಗಳನ್ನು ಎತ್ತಿಹಿಡಿಯಲು ತನ್ನನ್ನೇ ಸಮರ್ಪಿಸಿಕೊಳ್ಳುವ ತ್ಯಾಗದ ಕತೆಯ ಮೂಲಕ ಈ ಬಗೆಯ ನಿಲುವನ್ನು ಇನ್ನೂ ಹೆಚ್ಚು ಖಚಿತಗೊಳಿಸುತ್ತದೆ.

ಉತ್ತಮ ರಾಜರ ಪರಿಕಲ್ಪನೆಯನ್ನು ಪ್ರಶ್ನಿಸುವಂತೆ ತೋರುವ ಕತೆಗಳಲ್ಲೂ ಈಗಿರುವ ಸಮಾಜವ್ಯವಸ್ಥೆಯ ಮಾದರಿಯನ್ನೇ ಸೂಕ್ಷ್ಮರೀತಿಯಲ್ಲಿ ಎತ್ತಿ ಹಿಡಿಯಲಾಗಿದೆ. ಕೇರಳದ ಪಠ್ಯಪುಸ್ತಕಗಳು ಇತರ ಮಾದರಿಗಳಿಗೆ ಹೋಲಿಸಿದರೆ ಕುತೂಹಲಕರ ವೈರುಧ್ಯ ತೋರುತ್ತವೆ. ಇಲ್ಲಿ ರಾಜಕೀಯ ಹಿಡಿತದ ಯಾವುದೇ ನಿರ್ದಿಷ್ಟ ಮಾದರಿಯನ್ನು ಎತ್ತಿ ಹಿಡಿದಿಲ್ಲ. ಉತ್ತರಪ್ರದೇಶದ ಪುಸ್ತಕಗಳಲ್ಲಿನಂತೆ ಕೇರಳದ ಪುಸ್ತಕಗಳಲ್ಲಿ ಬುದ್ಧಿವಂತ ರಾಜರು ಪ್ರಾಬಲ್ಯದ ಸಂಕೇತವಾಗಿ ಮೂಡುವುದಿಲ್ಲ. ಬದಲಿಗೆ ಅಲ್ಲಿ ಮೈದಾಸ ಮತ್ತು ಲಿಯರನಂಥ ಮೂರ್ಖ ರಾಜರ ಕತೆಗಳಿವೆ. ಡಮನ್ ಮತ್ತು ಪೈತಿಯಸರಂತಹಾ ವಿಶ್ವಾಸಿ ಸ್ನೇಹಿತರಿಂದಾಗಿ ಮಾರ್ಪಾಡು ಹೊಂದುವ ಕ್ರೂರಿ ರಾಜ ಡಯೋನಿಸಿಸನಂತಹಾ ಇತರ ರಾಜರ ಕತೆಗಳೂ ಇವೆ.[27] ಗರ್ವಿ ರಾಜನ ಹಮ್ಮು ತಗ್ಗುವಂತಹಾ ಕತೆಗಳಿವೆ.[28] ಆದರೆ ಈ ಸಾಮರ್ಥ್ಯಹೀನ ರಾಜರು ತಿರಸ್ಕರಿಸಲ್ಪಡುವುದಿಲ್ಲ; ಪದಚ್ಯುತರಾಗುವುದಿಲ್ಲ. ಬದಲಿಗೆ ಮೈದಾಸನಂತಹಾ ಮೂರ್ಖರು ಪಾಠ ಕಲಿತು ಬುದ್ಧಿವಂತರಾಗುತ್ತಾರೆ. ಕ್ರೂರಿಗಳು ಕರುಣೆ ಕಲಿಯುತ್ತಾರೆ. ಗರ್ವಿಷ್ಟರು ವಿನಯವನ್ನು ಕಲಿಯುತ್ತಾರೆ. ಹಾಗಾಗಿ ಸಮಾಜದ ಮೂಲ ಸಂರಚನೆಯು ಎಂದೂ ಪ್ರಶ್ನೆಗೊಳಗಾಗುವುದಿಲ್ಲ. ಅಥವಾ ಪುನರ್ರಚನೆಯ ಪ್ರಯತ್ನವೂ ಆಗಿಲ್ಲ.

## ಗ್ರಾಮೀಣ ಮತ್ತು ನಗರದ ಭಾರತ: ಆಧುನಿಕತೆ ಮತ್ತು ಸರ್ವಕಾಲಿಕತೆ

ಈ ಪುಸ್ತಕಗಳಲ್ಲಿ ಬರುವ ಭೌಗೋಳಿಕ ಪ್ರದೇಶದ ವರ್ಣನೆಗಳು ಸಮಾಜದ ಪ್ರತಿಮೆಯನ್ನು ನಿರ್ದಿಷ್ಟವಾಗಿ ಕಟ್ಟುವ ಪ್ರಯತ್ನವನ್ನು ತೋರುತ್ತವೆ. ನಾವಿಲ್ಲಿ ಭಾರತವನ್ನು ಆಧುನಿಕ ತಂತ್ರಜ್ಞಾನದ, ಪ್ರಗತಿ ಹೊಂದುತ್ತಿರುವ ಮತ್ತು ಕೈಗಾರಿಕೀಕರಣಗೊಳ್ಳುತ್ತಿರುವ ದೇಶವಾಗಿ ನೋಡುತ್ತಲೇ ಮೂಲಭೂತವಾಗಿ ಹಳ್ಳಿಗಳ ದೇಶವಾಗಿಯೂ ಬಿಂಬಿತವಾಗುತ್ತಿರುವುದನ್ನು ಕಾಣುತ್ತೇವೆ. ಅಲ್ಲಿ ಸರ್ವಕಾಲಿಕ ಪ್ರಜ್ಞೆ ಮತ್ತು ಪರಂಪರಾಗತ ವಿವೇಕಗಳ ಗ್ರಾಮೀಣ ಲೋಕವನ್ನು ವೈಭವೀಕರಿಸಲಾಗಿದೆ. ಆದರೆ ಎದ್ದು ಕಾಣುವಂತೆ ಈ ಚಿತ್ರಣದಲ್ಲಿ ಗ್ರಾಮೀಣ ಲೋಕವನ್ನು ಸ್ತುತಿಸುತ್ತಲೇ ದೃಷ್ಟಿಯು ನಗರೀಕರಣದತ್ತ ಹೊರಳುತ್ತಿರುವುದನ್ನು ತೋರುತ್ತದೆ.

ಎಲ್ಲ ಪಠ್ಯಗಳೂ ಗ್ರಾಮೀಣ ಕಥನಗಳಿಗೆ, ವಿವರಗಳಿಗೆ ಸಾಕಷ್ಟು ಸ್ಥಳಾವಕಾಶ ಕೊಟ್ಟಿವೆ. ದೇಶದ ಸಂಪತ್ತಿಗೆ ರೈತರ ಅಮೂಲ್ಯ ಕೊಡುಗೆ, ಪಾತ್ರಗಳನ್ನು ಮನಮುಟ್ಟಿಸಿವೆ. ಉದಾಹರಣೆಗೆ ಉತ್ತರ ಪ್ರದೇಶದ ಪಠ್ಯಗಳ ಪ್ರತಿಶತ 20ರಷ್ಟು ಪಾಠಗಳು ಗ್ರಾಮಜೀವನದ ಮೇಲೇ ಇದೆ. ಗ್ರಾಮಜೀವನವು ಸತತವಾಗಿ ಆದರ್ಶಪ್ರತಿಮೆಯಾಗಿ ಬಿಂಬಿತವಾಗಿದೆ.

'ರೈತ' ('The Farmer') ಎಂಬ ಪಾಠವು ರೂಪಾ ಮತ್ತು ಕಿರಣರ ಸಂತೃಪ್ತಿ ಮತ್ತು ಸಾಮರಸ್ಯದ ಜೀವನವನ್ನು ಕಟ್ಟಿಕೊಡುತ್ತದೆ. 'ಅವರಿಗೆ ಹಳ್ಳಿಯಲ್ಲಿ ಸಣ್ಣ ಮನೆ ಇದೆ, ಅವರ ಬಳಿ ಒಂದು ಜತೆ ಎತ್ತು, ಒಂದು ಹಸು ಮತ್ತು ನಾಯಿ ಇವೆ... ಅವರ ತೋಟದಲ್ಲಿ ಸುಂದರವಾದ ಗಿಡಗಳು ಮತ್ತು ಹೂವುಗಳು ಇವೆ.'[29]

ಹಳ್ಳಿ ಮತ್ತು ನಗರ ಜೀವನ ('Town and Country Life') ಎಂಬ ಪಾಠದಲ್ಲಿ 'ಹಳ್ಳಿಯ ಜೀವನದಲ್ಲಿ ಶಾಂತಿ, ನೆಮ್ಮದಿ ಮತ್ತು ಆರೋಗ್ಯ ಇರುತ್ತದೆ. ಯಾವಾಗಲೂ ನಿಮಗೆ ಅಲ್ಲಿ ಒಳ್ಳೆಯ ಹಸಿರು ತರಕಾರಿ, ಹಾಲು ಮತ್ತು ಮೊಟ್ಟೆ ದೊರೆಯುತ್ತದೆ.' ಎಂದಿದೆ.[30]

ಉತ್ತರಪ್ರದೇಶದ ಪುಸ್ತಕಗಳಿಗಿಂತ ಭಿನ್ನವಾದ ದೃಶ್ಯಾವಳಿ ಕೇರಳದ ಪಠ್ಯಗಳಲ್ಲಿದ್ದರೂ ಗ್ರಾಮೀಣ ಪ್ರದೇಶದ ಸಹಜಸೌಂದರ್ಯ ಮತ್ತು ಸಂತೃಪ್ತಿಗಳ ಆದರ್ಶಗಳಲ್ಲಿ ಏಕರೂಪವಾಗಿವೆ. 'ಹಳ್ಳಿ' ('A Village')[31] ಎಂಬ ಪಾಠದಲ್ಲಿ ಬೆಟ್ಟ, ನದಿ, ಚರ್ಚು, ಫಲಭರಿತ ಮರಗಳು, ಹಸುಗಳು ಕೂಡಿದ ಗ್ರಾಮೀಣ ಕಥನದಲ್ಲಿ ನೀಮಾಳ ಮನೆಯನ್ನು ವರ್ಣಿಸಲಾಗಿದೆ. ಅಮ್ಮ ಹೇಳುವ 'ನೀಮಾ,ನಿಮ್ಮ ಮನೆ ಸುಂದರ; ನಿಮ್ಮ ತೋಟ ಸುಂದರ; ನಿಂಬೆ ಗಿಡಗಳು ಸುಂದರ; ಹಸು ಕರುಗಳು ಸುಂದರ' ಎಂಬ ಹೇಳಿಕೆ ಸಹಜ ಸೌಂದರ್ಯ ಮತ್ತು ನಿಸರ್ಗ ರಮಣೀಯತೆಯನ್ನು ಸಾಂಪ್ರದಾಯಿಕವಾಗಿ ರಮ್ಯವಾದ ರೀತಿಯಲ್ಲಿ ಚಿತ್ರಿಸಲಾಗಿದೆ. ವರ್ಡ್ಸ್ ವರ್ತ್ ನ 'ಸಾಲಿಟರಿ ರೀಪರ್'[32] , 'ಡ್ಯಾಫೋಡಿಲ್ಸ್'[33] ಮುಂತಾದ ಕವನಗಳನ್ನು ಸೇರಿಸಿರುವುದೂ 19ನೇ ಶತಮಾನದ ಹಳ್ಳಿಯ ರಮ್ಯ ಕಲ್ಪನೆಗೆ ಇಂಬು ಕೊಡುತ್ತದೆ.

ನಿಸರ್ಗದಂತೆಯೇ ಗ್ರಾಮೀಣ ಜನತೆಯೂ ಇತರರಿಗಿಂತ ಮಿಗಿಲೆಂದು ಸಾಂಪ್ರದಾಯಿಕವಾಗಿ ಬಿಂಬಿಸಲಾಗಿದೆ. ಅವರ ಕಾಲಾತೀತವಾದ ಸಹಜ ವಿವೇಕವನ್ನು ಸಾರ್ವಕಾಲಿಕ ಮೌಲ್ಯವಾಗಿ ಹರಳುಗಟ್ಟಿಸಲಾಗಿದೆ. 'ರಾಜ ಮತ್ತು ರೈತ' ('The King and the Farmer') ಎಂಬ ಪಾಠದಲ್ಲಿ 'ನಾನು ಸ್ವಾರ್ಥಿಯಾಗಲಾರೆ, ಇತರರಿಗಾಗಿಯೂ ನಾನು ಹಣ್ಣಿನ ಗಿಡ ನೆಡುತ್ತೇನೆ' ಎಂದು ಹೇಳುತ್ತಾ ಮಕ್ಕಳ ಸಲುವಾಗಿ ಗಿಡ ನೆಡುವ ರೈತನ ನಿಸ್ವಾರ್ಥ ಬುದ್ಧಿಯ ಮೂಲಕ ರಾಜನೂ ಪಾಠ ಕಲಿಯುತ್ತಾನೆ. ರಾಜನು ಮಂತ್ರಮುಗ್ಧನಾಗಿ ಹೇಳುತ್ತಾನೆ- 'ನಾವು ಅವನಿಂದ ಪಾಠ ಕಲಿಯಬೇಕು. ಅವನಂತಹಾ ಅನೇಕ ನಿಸ್ವಾರ್ಥ ಕೆಲಸಗಾರರು ನಮಗೆ ಬೇಕು'[34] ವೈಯಕ್ತಿಕತೆಯನ್ನು ಮೀರಿದ ರೈತನು ಒಂದು ಸಹಜ ವಿವೇಕ ಮತ್ತು ಮೌಲ್ಯಗಳ ಆದರ್ಶ ಪ್ರತಿಮೆಯಾಗಿ ಮೂಡುತ್ತಾನೆ.

ಆಧುನಿಕತೆಯ ಬಗ್ಗೆ ,ಗ್ರಾಮಜೀವನದ ಬಗ್ಗೆ ಸಂಭ್ರಮಿಸುತ್ತಿರುವ ಸಂದರ್ಭದಲ್ಲೂ ಆಧುನಿಕತೆಯು ಎಲ್ಲೆಡೆ ಸಮಾನವಾಗಿ ಹರಡಿಲ್ಲವೆಂದು ಆತಂಕಪೂರ್ಣವಾಗಿ ಗ್ರಹಿಸಲಾಗಿದೆ. ಗ್ರಾಮೀಣ ಭಾಗವನ್ನು ನಗರ ಪ್ರದೇಶಕ್ಕೆ ವಿರುದ್ಧ ಆಯಾಮದಲ್ಲಿಯೇ ಸದಾ ಚಿತ್ರಿಸಲಾಗಿದೆ. ನಗರ ಕೇಂದ್ರಿತ ದೃಷ್ಟಿಕೋನ ಅಥವಾ ನಗರ ಪಾರಮ್ಯದ ಪರ್ಯಾಯ ದೃಷ್ಟಿಯಾಗಿ ಇದನ್ನು ಬಳಸಲಾಗಿದೆ. ಪಠ್ಯಗಳಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ಜೀವನಗಳ ಗುಣಮಟ್ಟದ

ಅಂತರವನ್ನು ಕಳವಳದಿಂದಲೇ ಗುರುತಿಸಲಾಗಿದೆ. ನಗರ ಜೀವನದ ಅಸ್ತಿತ್ವಕ್ಕಿಂತಾ ಗ್ರಾಮಜೀವನ ಹೆಚ್ಚಿನದೆಂದು ತೋರಿಸುವ ಪ್ರಯತ್ನ, ನಿರ್ಧಾರ ಇಲ್ಲಿ ಕಾಣುತ್ತದೆ. 'ರಸ್ತೆಯ ನಿಯಮಗಳು' ಪಾಠವು ಗ್ರಾಮಜೀವನದ ಶಾಂತಿಯ ('ಇಲ್ಲಿ ಗುಂಪು ಗದ್ದಲಗಳಿಲ್ಲ'.) ಜತೆಗೆ ಲಕ್ನೋದ ಅಶಾಂತಿಯ ('ಇಲ್ಲಿ ಎಲ್ಲೆಡೆ ಎಷ್ಟೊಂದು ಜನ; ಯಾವಾಗಲೂ ಬೀದಿಗಳಲ್ಲಿ ವಿಪರೀತ ಗುಂಪುಗದ್ದಲ') ನಡುವಿನ ವೈರುಧ್ಯವನ್ನು ತೋರಿಸುತ್ತದೆ. ಗ್ರಾಮದ ಈ ಆದರ್ಶವು ಭಾರತದ ಭಾಗಶಃ ಆಧುನಿಕೀಕರಣವನ್ನು ಸಮರ್ಥಿಸುವ ಪ್ರಯತ್ನವಾಗಿದೆ. ಸಂಪ್ರದಾಯ ಮತ್ತು ಆಧುನಿಕತೆಗಳು ಕೈಜೋಡಿಸಿ ಸಾಗುವ ಭಾರತದ ಅನನ್ಯತೆಯ ಕುರುಹಾಗಿ ಉಪಸಂಸ್ಕೃತಿಯ ಲೋಕವನ್ನು ಮಂಡಿಸಲಾಗಿದೆ. ದೇಶದಲ್ಲಿನ ಈ ವೈರುಧ್ಯಗಳನ್ನು ಒಂದರೊಡನೊಂದು ಸಾಗುವಂತೆ ರಾಷ್ಟ್ರೀಯತೆಯನ್ನು ರೂಪಿಸುವ ಪ್ರಯತ್ನವು ವಿಶ್ವವ್ಯವಸ್ಥೆಯಲ್ಲಿ ಭಾರತಕ್ಕೆ ವಿಶೇಷ ಸ್ಥಾನವನ್ನು ಪ್ರತಿಪಾದಿಸುವ ಹಾದಿಯಾಗಿದೆ.

ಗ್ರಾಮಭಾರತದ ಆದರ್ಶದ ಜತೆಜತೆಗೇ ಆಧುನಿಕ ಪ್ರಗತಿಯ ಬಗ್ಗೆ ಸಂಭ್ರಮಿಸುವ ಸಮಾಂತರ ಪ್ರಕ್ರಿಯೆಯೂ ಇದೆ. ಗ್ರಾಮೀಣ ಜೀವನದ ಆಂತರ್ಯದಲ್ಲಿರುವ ಸಂತಸವು ಸ್ವಲ್ಪ ಮಟ್ಟಿನ ಶ್ರಮಜೀವನವನ್ನು ಸ್ವೀಕರಿಸಿದರೆ ಮಾತ್ರ ದಕ್ಕುತ್ತದೆ. 'ನಗರ ಮತ್ತು ಗ್ರಾಮಜೀವನ' ಪಾಠವು ಎರಡೂ ಜೀವನ ಶೈಲಿಯ ಹೆಗ್ಗಳಿಕೆಯ ಬಗ್ಗೆ ಚರ್ಚೆ ಒದಗಿಸಿದೆ. ಗ್ರಾಮಜೀವನವನ್ನು ಇಷ್ಟ ಪಡುವ ಮಕ್ಕಳು ಮತ್ತು ನಗರಜೀವನವನ್ನು ಇಷ್ಟ ಪಡುವ ಮಕ್ಕಳ ನಡುವಿನ ಸಂವಾದ ಇಲ್ಲಿದೆ. ಆದರೆ ಇದೇ ವಿಷಯದ ಇತರ ಪಾಠಗಳಲ್ಲಿ ಕಾಣುವಂತೆ ಇಲ್ಲಿ ಅಧಿಕಾರಯುತ ಧ್ವನಿ ಇಲ್ಲದ ಕಾರಣ ತಾತ್ಕಾಲಿಕವಾಗಿ ಎದುರಾಗುವ ಗ್ರಾಮಜೀವನದ ವಿಮರ್ಶೆ ಹಿಂದೆ ಸರಿಯುತ್ತದೆ. ಸಂವಾದದಲ್ಲಿ ಗ್ರಾಮಜೀವನದ ಪರವಾಗಿ ದೊಡ್ಡ ಧ್ವನಿ ಕೇಳಿಬರುತ್ತದೆ. ಹಳ್ಳಿಗರ ಶ್ರಮಸಂಸ್ಕೃತಿ, ದೈಹಿಕಶ್ರಮಗಳನ್ನು 'ಆರೋಗ್ಯಕರ ಜೀವನಶೈಲಿಗೆ ಅವು ಸಹಾಯಕ; ಅವು ಅವರಿಗೆ ಇಷ್ಟ' ಎಂಬಂತಹಾ ಹೇಳಿಕೆಗಳಿಂದ ಒಪ್ಪಿಸುವ ಪ್ರಯತ್ನ ಇದೆ.[37]

ಅಲ್ಲದೇ ಹಳ್ಳಿಗರೂ ಆಧುನಿಕತೆಯ ಮೆರವಣಿಗೆಯಲ್ಲಿ ಸಹಭಾಗಿಗಳು ಎಂಬ ಸೂಚನೆಯನ್ನು ಸೂಕ್ಷ್ಮವಾಗಿ ತರಲಾಗಿದೆ. 'ಈಗ ಹಳ್ಳಿಗಳಲ್ಲಿ ಚಿತ್ರಮಂದಿರಗಳಿವೆ' ಎಂದು ಅದೇ ಪಾಠ ಖಾತರಿಪಡಿಸುತ್ತದೆ. 'ಅವರಿಗೆ ಬೇಕಾದ್ದನ್ನೆಲ್ಲಾ ಹಳ್ಳಿಯಲ್ಲಿ ಅವರೇ ಪಡೆದುಕೊಳ್ಳುತ್ತಾರೆ' ಎಂಬ ಹೇಳಿಕೆಯಿಂದ ಅಲ್ಲಿ ಅಂಗಡಿಗಳಿಲ್ಲದಿರುವುದನ್ನು ಅಪ್ರಸ್ತುತವೆನಿಸಿಬಿಡುತ್ತದೆ. ನೀರು ಮತ್ತು ಶಕ್ತಿಮೂಲವೂ ಅವರಿಗೆ ಸಮಸ್ಯೆಯಂತೆ ಗೋಚರಿಸುವುದಿಲ್ಲ. 'ಮುಂಬರುವ ದಿನಗಳಲ್ಲಿ ನೀರಿನ ಸಮಸ್ಯೆ ಇರುವುದಿಲ್ಲ. ಈಗಾಗಲೇ ಹಳ್ಳಿಗಳಲ್ಲಿ ಕೊಳವೆ ಬಾವಿಗಳಿವೆ. ಎಲ್ಲ ಹಳ್ಳಿಗಳಿಗೂ ವಿದ್ಯುತ್ ತಲುಪುತ್ತಿದೆ.' ಎಂದಿದ್ದಾರೆ.

ಹಾಗೆಯೇ 'ಅಶೋಕನ ಉತ್ತರ' ಎಂಬ ಪಾಠದಲ್ಲಿ ಒಬ್ಬ ಹುಡುಗ ಜಪಾನಿನಲ್ಲಿರುವ ತನ್ನ ಪತ್ರ ಸ್ನೇಹಿತನಿಗೆ ಆಧುನಿಕ ಭಾರತದ ಗ್ರಾಮೀಣ ಪ್ರಗತಿಯ ಬಗ್ಗೆ ಬರೆಯುವಂತಿದೆ. "ಕೃಷಿಗೆ ಸಹಾಯಕವಾಗುವಂತೆ ಈಗ ರೈತರಿಗೆ ವರ್ಷದುದ್ದಕ್ಕೂ ವಿದ್ಯುತ್ ಸರಬರಾಜು ಆಗುತ್ತಿದೆ. ನೇಗಿಲು ಹೋಗಿ ಟ್ರಾಕ್ಟರ್ ಬಂದಿದೆ". 'ವಿದ್ಯುತ್ ದೀಪಗಳು ಮತ್ತು ಒಳ್ಳೆಯ ರಸ್ತೆಗಳಿಂದಾಗಿ ಹಳ್ಳಿಗಳು ಹೆಚ್ಚು ಸುಧಾರಿತವಾಗಿವೆ. ಈಗೀಗ ಕೆಲವು ಹಳ್ಳಿಗಳಲ್ಲಿ ನಗರದ ಎಲ್ಲ ಅನುಕೂಲತೆಗಳಿದ್ದೂ ನಗರದ ಅನನುಕೂಲಗಳಿಂದ ಹೊರತಾಗಿವೆ.'[38]

ಅಭಿವೃದ್ಧಿಯ ಒಂದೇ ಹಾದಿ ಎಂದರೆ ಆಧುನಿಕತೆ ಎಂಬ ಧೋರಣೆಯ ಪಠ್ಯಪುಸ್ತಕಗಳು ರಾಷ್ಟ್ರವಿಕಾಸದ ರೂಪುರೇಷೆಯನ್ನು ಅನಿವಾರ್ಯವಾಗಿ ದೇಶದ ಆರ್ಥಿಕನೀತಿಯ ಸಮರ್ಥನಾತ್ಮಕ ಹೇಳಿಕೆಗಳಿಂದ ಕಟ್ಟಿಕೊಡುತ್ತಿವೆ. ಅದರ ಉತ್ತಮ ಉದಾಹರಣೆಗಳು 50 ವರ್ಷಗಳ ಹಿಂದಿನ ಭಾರತ ಮತ್ತು ಪ್ರಸಕ್ತ ಭಾರತದ ಹೋಲಿಕೆ ಹೇಳುವ ಒಂದು ಪಾಠದಲ್ಲಿದೆ.

'ಅಶೋಕನ ಉತ್ತರ' (ಜಪಾನಿ ಪತ್ರ ಸ್ನೇಹಿತನಿಗೆ) ಪಾಠದಲ್ಲಿ ನವಭಾರತದ ಪ್ರಗತಿ ಮತ್ತು ಆಧುನಿಕತೆಯ ಬಗ್ಗೆ ಹೊಗಳಿಕೆಯ ಮಳೆಗರೆದಿದೆ. ಅಶೋಕ ಅವನ ಸ್ನೇಹಿತನಿಗೆ ಅವನ ಅಜ್ಜನ ಕಾಲದಲ್ಲಿ ಬಸ್ಸುಗಳಿರಲಿಲ್ಲವಾಗಿ ಶಾಲೆಗೆ ಹೋಗಲು 30 ಮೈಲಿ ನಡೆಯಬೇಕಿತ್ತು ಎಂದು ಹೇಳುತ್ತಾನೆ. 'ಈಗೀಗ ಎಲ್ಲ ಹಳ್ಳಿಗಳಲ್ಲೂ ಶಾಲೆಗಳಿವೆ. ಉಚಿತ ಶಿಕ್ಷಣ ದೊರೆಯುತ್ತಿದೆ. 'ಪ್ರತಿ ಪೋಷಕರೂ ಬಡವರಿರಲಿ, ಶ್ರೀಮಂತರಿರಲಿ, ಮಗುವನ್ನು ಶಾಲೆಗೆ ಕಳುಹಿಸಲು ಕಾತರರಾಗಿರುತ್ತಾರೆ' ಹಿಂದುಳಿದಿರುವಿಕೆ ಮತ್ತು ಅಭಿವೃದ್ಧಿಹೀನತೆಗಳು ಗ್ರಾಮೀಣಭಾರತದಲ್ಲಿ ಮಾತ್ರ ಇವೆ ಎನ್ನುವುದೇ ತಥ್ಯ ಎಂಬಂತೆ ಪ್ರಕಟಗೊಂಡಿವೆ. ಅದಕ್ಕೆ ಸಂವಾದಿಯಾಗಿ ನಮ್ಮ ಹೆಗ್ಗಳಿಕೆ ಎಂದರೆ

> 'ನಮ್ಮ ದೇಶಕ್ಕೆ ಬರುವ ಯಾವ ಪ್ರವಾಸಿಯೂ ನಾವು ಕಟ್ಟಿರುವ ಕೆಲವು ಜಲಾಶಯಗಳನ್ನು ನೋಡದೇ, ಹಿಗ್ಗಿ ಹೊಗಳದೇ ಹೋಗುವುದೇ ಇಲ್ಲ. ಪಂಚವಾರ್ಷಿಕ ಯೋಜನೆಗಳಿಗೆ ಧನ್ಯವಾದ ಹೇಳಬೇಕು ಏಕೆಂದರೆ ದೊಡ್ಡ ದೊಡ್ಡ ಉಕ್ಕು ಕಾರ್ಖಾನೆಗಳೂ, ರೈಲು ತಯಾರಿಕಾ ಘಟಕಗಳೂ ಇಲ್ಲಿ ಬಂದಿವೆ.'[39]

ಗ್ರಾಮೀಣ ಭಾರತವನ್ನು ಕೇಂದ್ರೀಕರಿಸಿ ಮಾತನಾಡುವಾಗ ಪಠ್ಯ ಪುಸ್ತಕಗಳು ಹೊರಗಿನ ದೃಷ್ಟಿಕೋನದಲ್ಲೇಲ್ಲೋ ನಿಂತು ನೋಡುತ್ತವೆ. ವಿಪರ್ಯಾಸವೆಂದರೆ ಗ್ರಾಮಭಾರತದ ಅನನುಕೂಲಗಳನ್ನು (ಮೇಲ್ನೋಟಕ್ಕೇ ಗೋಚರಿಸುತ್ತಿದ್ದರೂ) ತಗ್ಗಿಸುವ ಭರದಲ್ಲಿ ಪಠ್ಯಗಳು ಸಂತೃಪ್ತಿಸೂಚಕಗಳೆಂದರೆ ಅಂಗಡಿ, ಚಿತ್ರಮಂದಿರ, ವಿದ್ಯುತ್ ಗಳು ಮಾತ್ರ ಎಂಬ ಮೂಲಭೂತ ಧೋರಣೆಯನ್ನು ಪ್ರಶ್ನಿಸುವ ಗೋಜಿಗೇ ಹೋಗುವುದಿಲ್ಲ.

ಆಧುನಿಕತೆ ಮತ್ತು ಪ್ರಗತಿಯ ದೃಷ್ಟಿಕೋನವೇ ಸಂಕುಚಿತವಾಗಿದೆ. ರಸ್ತೆಗಳು ಮತ್ತು ದೀಪಗಳಿಗೆ ಸೀಮಿತವಾಗಿದೆ. ಕೊಳ್ಳುಬಾಕ ಸಂಸ್ಕೃತಿಗೆ ತೆರೆದುಕೊಳ್ಳುವಿಕೆ ಮತ್ತು ಕೈಗಾರಿಕೀಕರಣಗಳಿಗಿಂತ ಭಿನ್ನವಾದ ಆಧುನಿಕತೆಯ ಸಂಕೇತವನ್ನು ಸೂಚಿಸುವ ಗ್ರಾಮಭಾರತದ ಪರ್ಯಾಯ ಪರಿಕಲ್ಪನೆ/ಸಾಧ್ಯತೆಗಳನ್ನು ಅದು ತೆರೆದಿಡುವುದಿಲ್ಲ. ಹಾಗಾಗಿ ಗ್ರಾಮಭಾರತ ಮತ್ತು ನಗರ ಭಾರತದ ಮಧ್ಯೆ ಒಂದು ಅಗಾಧ ಕಂದರ ಇದೆ ಮತ್ತು ಅದನ್ನು ವೈಭವೀಕರಿಸಿದಾಗ ಹಳ್ಳಿಗಳು ಅದರ ಸೌಂದರ್ಯದಲ್ಲಿ ಅಮೂರ್ತತೆ ಮತ್ತು ಸರ್ವಕಾಲಿಕತೆ ಮೆರೆಯುತ್ತವೆ. ಮತ್ತೊಂದು ದೃಷ್ಟಿಯಿಂದ ಪ್ರಸ್ತುತ ಸಂದರ್ಭದಲ್ಲಿ ಅದನ್ನು ಹಿಂದುಳಿದಿರುವಿಕೆಯನ್ನು ಮೀರಿ ಆಧುನಿಕತೆಯ ಹಾದಿಯಲ್ಲಿ ರೂಪಾಂತರಗೊಳ್ಳುತ್ತಿದೆ ಎಂದು ಬಿಂಬಿಸುವ ವ್ಯಾಖ್ಯೆ ಇದೆ. ಈ ವೈರುಧ್ಯವು ಪ್ರಬಲವಾದ ನಗರದ ಸಾಂಸ್ಕೃತಿಕ ವಿಶ್ವದಲ್ಲಿ ಹಳ್ಳಿಗಳು ಕಳೆದುಹೋಗುತ್ತಿರುವುದರ ಆತಂಕವನ್ನು (ಬಾಯ್ಬಿಟ್ಟು ಹೇಳದಿದ್ದರೂ) ಸ್ಥಿರೀಕರಿಸುತ್ತದೆ.[40]

ಈ ಬಗೆಯ ಧೋರಣೆಯು ಆಧುನಿಕ ಭಾರತದ ಪ್ರಗತಿಯ ಬಗೆಗಿನ ಪಾಠಗಳಲ್ಲೂ ಅಂತೆಯೇ ಆಧುನಿಕ ಭಾರತದ ವಿದ್ಯಾರ್ಥಿ ಹೊಂದಬೇಕಾದ ಮೌಲಿಕವೆನ್ನುವಂತಹಾ ಜ್ಞಾನ ಮತ್ತು ಮಾಹಿತಿಯ ಮಾದರಿಯ ಪಾಠಗಳಲ್ಲೂ ಕಂಡುಬರುತ್ತದೆ. ಆ

ಜ್ಞಾನಕ್ಕೆ ತಳುಕುಹಾಕಿಕೊಂಡಂತಹಾ ಮೌಲ್ಯ ಮತ್ತು ಸಂಪ್ರದಾಯದ ಮೇಲೆ ಆಧುನಿಕತೆಯ ಅತೀವ ಪ್ರಾಶಸ್ತ್ಯ, ಸ್ಥಳೀಯ ಜ್ಞಾನದ ಮೇಲೆ ಸಾರ್ವಕಾಲಿಕ ಸತ್ಯಗಳ ಪ್ರಾಶಸ್ತ್ಯಗಳು ಸಮಾಜದ ಸಾಂಸ್ಕೃತಿಕ ಆಕಾಂಕ್ಷೆಗಳ ದ್ಯೋತಕವಾಗಿವೆ.

ಆ ಬಗೆಯ ಪಾಠಗಳ ತೊಂದರೆ ಎಂದರೆ ಅವು ಆಧುನಿಕತೆಯ ಒಂದೇ ಪರ್ಯಾಯವನ್ನು ಸೂಚಿಸುತ್ತದೆ. ನಗರದ, ಕೈಗಾರಿಕೀಕರಣದ ಹಾದಿಯನ್ನು ಸಮಸ್ಯಾರಹಿತ ಮೌಲ್ಯವಾಗಿ ಕಾಣಲಾಗಿದೆ. ಅದು ತಾಂತ್ರಿಕ ಪ್ರಗತಿಯನ್ನು ದೇಶದ ಆತ್ಮಗೌರವದ ನಿಶ್ಚಿತ ಸೂಚ್ಯಂಕವಾಗಿ ಮುಂದಿಡುತ್ತದೆ. ಉದಾಹರಣೆಗೆ ನಗರಕ್ಕೆ ಜನಗಳ ವಲಸೆಯನ್ನು ಸಮಸ್ಯಾರಹಿತವೆಂದು ಸ್ವೀಕರಿಸಲಾಗಿದೆ. ಮತ್ತು ಅದನ್ನೇ ಪ್ರಗತಿಯ ದ್ಯೋತಕವೆಂದು ವೈಭವೀಕರಿಸಲಾಗಿದೆ. 'ಕಾರ್ಖಾನೆಗಳಲ್ಲಿ, ಕೈಗಾರಿಕೆಗಳಲ್ಲಿ ವೃತ್ತಿ ಹುಡುಕಿಕೊಂಡು ಅನೇಕ ಕುಟುಂಬಗಳು ನಗರ-ಪಟ್ಟಣಗಳಿಗೆ ಸಾಗುತ್ತಿದ್ದಾರೆ'[41] ಈ ಬಗೆಯ ಹೇಳಿಕೆಗಳು ಕೃಷಿನೆಲ ಬೀಳು ಬಿಡುತ್ತಿರುವ ಬಗ್ಗೆ, ಮುಂಗಾರು ಕೈ ಕೊಡುತ್ತಿರುವುದರಿಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ, ವಲಸೆ ಕಾರ್ಮಿಕರ ಅನೇಕ ಸಮಸ್ಯೆಗಳ ಬಗ್ಗೆ (ಅದು ಕಂಡೇ ಇಲ್ಲ ಎನ್ನುವಷ್ಟು) ಕುರುಡಾಗಿದೆ.

ತಾಂತ್ರಿಕ ಪ್ರಗತಿಯ ವಿಷಯವನ್ನು ಹೀಗೆ ಭಾವಿಸುತ್ತಿರುವುದರಿಂದ ಪಠ್ಯ ಓದುವ ಮಗುವು ಆಧುನಿಕತೆಯಿಂದ ಸಮಾಜ, ಸಂಸ್ಕೃತಿ ಅಥವಾ ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ಕಾಣುವಲ್ಲಿ ವಿಫಲವಾಗುತ್ತದೆ. ಆಧುನಿಕತೆಯನ್ನು ವೈಭವೀಕರಿಸುತ್ತಾ ಪ್ರಗತಿಯ ಪರ್ಯಾಯ ಮಾದರಿಗಳನ್ನು ಕೀಳಾಗಿಸಲಾಗಿದೆ. ಈ ಪ್ರಕ್ರಿಯೆಯಲ್ಲಿ ಪಠ್ಯಪುಸ್ತಕಗಳು ಮಧ್ಯಮವರ್ಗದ ಮಗುವನ್ನು ಬೇಕೆಂದೇ ಕುರುಡಾಗಿಸಿವೆ. ಆಧುನಿಕತೆಯ ಪವಾಡದ ಮತ್ತು ಬಂಡವಾಳಶಾಹಿ ಪ್ರಗತಿಯ ಫಲವನ್ನು ಅನುಭವಿಸುತ್ತಿರುವವರು ಅದಕ್ಕೆ ತೆರಬೇಕಾದ ಮೌಲ್ಯ ಏನೆಂದು ಅರಿತಿಲ್ಲ. ಭೂಮಿ ಕಳೆದುಕೊಂಡ ರೈತರು, ಕಾರ್ಖಾನೆಗಳಲ್ಲಿ ದುಡಿಯುವ ಮಕ್ಕಳು, ಹೊರಗಿನ ಮಾರುಕಟ್ಟೆಗೆ ಪ್ರವೇಶವೇ ಸಿಗದ ಬಡವರು ನೇರವಾಗಿ ಅಂತರಾಷ್ಟ್ರೀಯ ಬಂಡವಾಳಕ್ಕೆ ತೆರೆದುಕೊಳ್ಳಬೇಕಿದೆ. ಈ ವ್ಯವಸ್ಥೆಗೆ ಬಲಿಯಾದವರು (ಭಾರತದ ಈ ಇನ್ನೊಂದು ಭಾಗ) ಆಧುನಿಕ ಭಾರತದಲ್ಲಿ 'ಲೆಕ್ಕಕ್ಕೆ ಸಿಗದವರೇ' ಆಗಿಬಿಡುತ್ತಾರೆ. ಯಾರು ಬದಲಾವಣೆ ತರಲು ತಿಳಿವಳಿಕೆ ಮತ್ತು ಅಧಿಕಾರ ಹೊಂದಿದ್ದಾರೋ ಅವರ ದೃಷ್ಟಿಯ ಪಥದಲ್ಲಿ 'ಭಾರತದ ಈ ಇನ್ನೊಂದು ಭಾಗ' ಕಾಣಿಸುವುದೇ ಇಲ್ಲ.

**ಬಂಡವಾಳ ಹಂಚಿಕೆ**

ಭಾರತದ ಈ ಇನ್ನೊಂದು ಭಾಗವನ್ನು ಮರೆಯಲು ಬೇರೆಬೇರೆ ಭಾವನೆಗಳನ್ನು ತಟ್ಟುವ ಒಂದು ಆದರ್ಶವನ್ನು ಕಟ್ಟಿಕೊಡುವ ಮೂಲಕ ಮಾತ್ರ ಸಾಧ್ಯ. ಸಂಪತ್ತು ಹೊಂದುವ ಆಶೆಯನ್ನು ಅಪಮೌಲ್ಯಗೊಳಿಸುವ ಮೂಲಕ ಮಾತ್ರ ಸಂಪತ್ತಿನ ವಿತರಣೆಯಲ್ಲಿನ ಅಸಮತೋಲನವನ್ನು ಒಪ್ಪಿಸಲು ಸಾಧ್ಯ. ಗಾಂಧಿ ಪ್ರಣೀತ ವೈರಾಗ್ಯ ಅಥವಾ ಬ್ರಾಹ್ಮಣಸಂಸ್ಕೃತಿಯ ಹಿಂದೂ ಶಾಸ್ತ್ರಗ್ರಂಥಗಳಲ್ಲಿ ಹೇಳುವ ಪರಲೋಕ ಸಾಧನಗಳು ಅಥವಾ ಶ್ರಮಜೀವನದ ವೈಭವೀಕರಣಗಳ ಮೂಲಕ ಈ ಸಿದ್ಧಾಂತವು ಹಣ ಗಳಿಸುವ ಆಶೆಯನ್ನು ಸಂಪತ್ಸಾಧನೆಯನ್ನು ಕೀಳುಗೈಯುತ್ತದೆ. ಇನ್ನೊಂದೆಡೆ ಸ್ಪಷ್ಟವಾಗಿ ಕಾಣುವ ಬಡತನ ಮತ್ತು ಮೇಲಿನ ವಾದಕ್ಕೆ ವಿರುದ್ಧವಾದ ಸಮಾಜವಾದದ ತಾತ್ವಿಕ ವಿಚಾರಸರಣಿಗಳು ಈ ಪ್ರಚಲಿತ ಆರ್ಥಿಕ ಹಂಚಿಕೆಯಲ್ಲಿನ ಅಸಾಮಂಜಸ್ಯವನ್ನು ಎತ್ತಿ ತೋರುತ್ತದೆ.

ಹಾಗಾಗಿ ಶಾಲಾ ಪಠ್ಯಗಳು ಸಂಪತ್ತಿನ ವಿಷಯವನ್ನು, ಅದರ ಪ್ರಾಮುಖ್ಯತೆ, ಹೊಂದುವ ರೀತಿಗಳನ್ನು ಹೇಳುವಾಗ ಕೊಂಚ ಇರುಸುಮುರುಸಿನಿಂದಲೇ ಪರಿಭಾವಿಸುತ್ತವೆ. ಸಂಪತ್ತಿನ ಶೇಖರಣೆಯೇ ಜೀವನದ ಆದರ್ಶವಾಗುವುದನ್ನು ಒಪ್ಪದೇ ಅದು ದುರಾಸೆಗೆ ಪರ್ಯಾಯ ಪದವೆಂಬಂತೆಯೇ ಸದಾ ಚಿತ್ರಿಸುತ್ತದೆ. ಮತ್ತೆ ಮತ್ತೆ ಈ ವಿಷಯವನ್ನು ಪ್ರಸ್ತಾಪಮಾಡುವಾಗೆಲ್ಲ ಆತಂಕದಿಂದಲೇ ಈ ವಿಷಯದತ್ತ ಹೊರಳುತ್ತದೆ. ಕೇರಳದ ಒಂದು ಪಠ್ಯವನ್ನು ಉದಾಹರಣೆಗೆ ತೆಗೆದುಕೊಂಡರೆ,[42] ಅಲ್ಲಿ ಮೈದಾಸನ ಕತೆ ಇದೆ. ಅವರಿಗೆ ಸಿಗುವ ಚಿನ್ನದ ಕೊಡವನ್ನು ಸಂಪೂರ್ಣವಾಗಿ ತಮ್ಮ ಸ್ವಂತದ್ದಾಗಿಸಿಕೊಳ್ಳುವ ತವಕದಲ್ಲಿ ಒಬ್ಬರನ್ನೊಬ್ಬರು ಕೊಲ್ಲುವ 'ನಾಲ್ವರು ದುರಾಶಾಪೂರಿತ ಯುವಕರ' ಕತೆ ಇದೆ. 'ಪ್ರಪಂಚದ ಅಮೂಲ್ಯ ವಸ್ತು' ಎಂಬ ಕತೆಯಲ್ಲಿ ಇಬ್ಬರು ಸೋದರರು ಹಣವನ್ನು, ಅಧಿಕಾರವನ್ನು ಹೊಂದಿದರೆ ಮೂರನೆಯವನು ಸ್ವಲ್ಪದರಲ್ಲೇ ಸಂತೃಪ್ತಿಯನ್ನು ಸಾಧಿಸುತ್ತಾನೆ. ಈ ಎಲ್ಲ ಕತೆಗಳ ನೀತಿಯನ್ನು ಭಟ್ಟಿ ಇಳಿಸುವ ರೀತಿಯಲ್ಲಿ ಒಬ್ಬ ಸೋದರ ಹೇಳುತ್ತಾನೆ-"ಈ ಎಲ್ಲ ಸಂಪತ್ತಿದ್ದೂ ನಾನು ಅಸುಖಿಯಾಗಿದ್ದೇನೆ." ಇನ್ನೊಬ್ಬ ಹೇಳುತ್ತಾನೆ- "ಅವನು ಪ್ರಪಂಚದ ಅಮೂಲ್ಯ ವಿಷಯ ಕಂಡುಕೊಂಡಿದ್ದಾನೆ. ಅವನಿಗೆ ಸಂತೃಪ್ತಿ ಲಭಿಸಿದೆ." ಅಂತೆಯೇ ಇನ್ನೊಂದು ಪುಸ್ತಕವೂ ಇದೇ ಭಾವನೆಯನ್ನು ಪೋಷಿಸುತ್ತದೆ. 'ಸೈತಾನ ಮತ್ತು ರೊಟ್ಟಿ' ಕತೆಯಲ್ಲಿ ಸೈತಾನನ ಶಿಷ್ಯನೊಬ್ಬ ಒಮ್ಮೆ ಕರುಣಾಳುವಾಗಿದ್ದ ರೈತನನ್ನು ಅವನಿಗೆ ವಿಫುಲಸಂಪತ್ತಿನ ಆಸೆ ತೋರಿಸಿ ಹೇಗೆ ವಿನಾಶಗೈದನೆಂದು ವಿವರಿಸುತ್ತದೆ. ಇದಕ್ಕೆ ಪರ್ಯಾಯವಾಗಿ 'ಕರುಣೆಗೆ ಸಂದ ಬಹುಮಾನ' ಕತೆಯಲ್ಲಿ ಇಬ್ಬರು ಬಡರೈತರು ತಮ್ಮ ಬಳಿ ಇದ್ದ 'ಸ್ವಲ್ಪ'ವನ್ನೇ ಬಂದ ದೇವತೆಗಗಳಿಗೆ ಹಂಚಿ ವರ ಪಡೆದ ವಿಷಯವಿದೆ.

ಪರಿಶ್ರಮ ಮತ್ತು ಪ್ರತಿಫಲಕ್ಕೆ ಸಂಬಂಧಿಸಿದ ಪ್ರಶ್ನೆಗಳಲ್ಲಿ ಕುತೂಹಲಕರವಾಗಿ ಒಂದು ವೈರುಧ್ಯದ ಮನೋಭಾವ ಕಾಣುತ್ತದೆ. ಒಂದೆಡೆ ಪರಿಶ್ರಮದ ಬಗ್ಗೆ ಪ್ರೀತಿ –ಗೌರವ; ಇನ್ನೊಂದೆಡೆ ಅದರಿಂದ ಬರಬಹುದಾದ ಪ್ರತಿಫಲದ ಬಗ್ಗೆ ವೈರಾಗ್ಯ, ತಿರಸ್ಕಾರ ಮತ್ತು ಹೆಚ್ಚಿನ ಸಂಪತ್ತನ್ನು ಹೊಂದುವುದರ ಬಗ್ಗೆ, ಸಂಪತ್ತಿನ ಒಡೆತನದ ಬಗ್ಗೆ ಕೀಳರಿಮೆ ಕಾಣುತ್ತದೆ. ಎರಡೂ ಮನೋಭಾವಗಳನ್ನು ಸೇರಿಸಿದರೆ ಆರ್ಥಿಕವಾಗಿ ಹಿಂದೂ ಹೋಗದ ಮುಂದೂ ಹೋಗದ ಸ್ಥಿತಿಯನ್ನು ಈ ಕತೆಗಳು ಮಂಡಿಸುತ್ತವೆ. ದಿಢೀರನೆ ಸಿಗುವ ಸಂಪತ್ತು ಸೈತಾನನ ರೈತನಿಗೆ, ನಾಲ್ವರು ಯುವಕರಿಗೆ ತಂದಂತೆ ವಿನಾಶವನ್ನೇ ತರುತ್ತದೆ ಎಂಬ ಅಂಶ ಬರುತ್ತದೆ.

ಹಿಟ್ಟಿನ ಗಿರಣಿಯ ವ್ಯಾಂಗನ ಕತೆಯಲ್ಲಿ[43] ಸಂಪತ್ತು ಗಳಿಸುವ ಸುಲಭ ಮಾರ್ಗಕ್ಕೆ ಆಸೆ ಪಡುವುದರ ವಿರುದ್ಧ ನೇರ ಎಚ್ಚರಿಕೆ ನೀಡಲಾಗಿದೆ. ನೆರೆಮನೆಯಾತ ತನ್ನ ಜಮೀನಿನಲ್ಲಿ ಚಿನ್ನ ಹುದುಗಿದೆ ಎಂಬ ಕನಸು ಕಂಡು ನೆಲ ಅಗೆದದ್ದು ನೋಡಿ ಸ್ಫೂರ್ತನಾದ ವ್ಯಾಂಗ್ ಗಿರಣಿಯಲ್ಲಿ ಕೆಲಸ ನಿಲ್ಲಿಸಿ ಕನಸಿಗೆ ಹಂಬಲಿಸುತ್ತಾನೆ. ಕಡೆಗೊಂದು ರಾತ್ರಿ ಗಿರಣಿಯ ಗೋಡೆಯ ಅಡಿ ಚಿನ್ನ ಇದೆ ಎಂಬ ಕನಸು ಕಂಡು ಅನಿವಾರ್ಯವಾಗಿ ಅಲ್ಲಿ ಅಗೆಯುತ್ತಾನೆ. ಚಿನ್ನ ಕಾಣುವುದಿಲ್ಲ. ಅಷ್ಟೇ ಅಲ್ಲ ಅವನ ಗಿರಣಿಯೂ ನೆಲಸಮವಾಗಿರುತ್ತದೆ. ದಿಢೀರನೆ ಸಿಗುವ ಸಂಪತ್ತಿಗೆ ಆಸೆ ಪಡುವುದು ಮೂರ್ಖತನವಷ್ಟೇ ಅಲ್ಲ ವಿನಾಶಕ್ಕೂ ಕಾರಣ ಎಂದು ವಿದ್ಯಾರ್ಥಿಗಳು ನಿರ್ಧಾರ ತಳೆಯುವಂತೆ ಮಾಡುತ್ತದೆ ಈ ಕತೆ. ಗಿರಣಿಯವನ ಜೀವನಧ್ಯೇಯ ಹಿಟ್ಟು ಮಾಡುವುದಷ್ಟೇ ಹೊರತು ನಿಧಿ ಹುಡುಕುವುದಲ್ಲ.

## ಸಾರಾಂಶ

ಈ ಪಠ್ಯಗಳಲ್ಲಿ ರಾಷ್ಟ್ರವನ್ನು, ರಾಷ್ಟ್ರದ ಪ್ರತಿಮೆಯನ್ನು ಕಟ್ಟಿಕೊಡುವುದು ಆದರ್ಶದ ಹಾದಿಯ ಪ್ರಜ್ಞಾಪೂರ್ವಕ ಪ್ರಯತ್ನ ಎಂದು ನಾವು ವಾದಿಸಿದ್ದೇ ಆದರೆ ಯಾರ, ಯಾವ ಆದರ್ಶ ಇಲ್ಲಿ ಪ್ರತಿಫಲಿತವಾಗಿದೆ ಎಂಬ ಪ್ರಶ್ನೆಯನ್ನು ನಾವು ಎದುರಿಸಬೇಕಾದೀತು. ರಾಜ್ಯದ ನೀತಿಯ ಹಿಂದಿನ ಪ್ರಭಾವೀ ಆದರ್ಶಗಳ ಪ್ರತಿಫಲನವಾಗಿ ಪಠ್ಯಗಳು ಕಾರ್ಯ ನಿರ್ವಹಿಸುತ್ತವೆ ಎಂದು ಮೇಲ್ನೋಟಕ್ಕೆ ತೋರುತ್ತದೆಯಾದರೂ ನಮಗೆ  ಮುಖ್ಯವಾಗುವ, ಆಸಕ್ತಿ ಕೆರಳಿಸುವ ಪ್ರಶ್ನೆಗಳೆಂದರೆ-ಅದನ್ನು ಹೇಗೆ ಮಂಡಿಸಿದೆ ಮತ್ತು ಯಾರ ರಾಜಕೀಯನೀತಿ ಈ ಪ್ರಕ್ರಿಯೆಯಲ್ಲಿ ಅಂತಿಮವಾಗಿ ಪ್ರತಿಫಲಿತವಾಗಿದೆ ಎನ್ನುವುದು.

ತಮ್ಮದೇ ಕಲ್ಪನೆಯಲ್ಲಿ ರಾಷ್ಟ್ರ, ರಾಷ್ಟ್ರೀಯತೆಯನ್ನು ಕಲ್ಪಿಸಿಕೊಳ್ಳಬಯಸುವ ಯಾವುದೇ ಸಂಕೀರ್ಣ ಅಧಿಕಾರದ ಲಾಬಿಯ ಆದರ್ಶಗಳ ಪಟ್ಟಿಯೂ ಪರಿಪೂರ್ಣವಾಗಿರಲು ಸಾಧ್ಯವಿಲ್ಲ; ಅಲ್ಲಲ್ಲೇ ಮಹತ್ವದ ವೈರುಧ್ಯಗಳು ಇರುವುದು ಸ್ಪಷ್ಟ. ಗಾತ್ರ, ವೈವಿಧ್ಯತೆ ಮತ್ತು ಮುಖ್ಯವಾಗಿ ಭಾರತೀಯ ಸಮಾಜ ಮತ್ತು ಆರ್ಥಿಕತೆಗಳ ಶಾಖೋಪಶಾಖಾ ಸ್ವಭಾವ, ಆ ವೈರುಧ್ಯಗಳ ಚರ್ಚೆಯಲ್ಲಿ ಪಂಗಡಗಳನ್ನು ಮೂಡಿಸುತ್ತವೆ.  ಅವೇ ಭಾವನೆಗಳು ಪಠ್ಯದಲ್ಲಿ ಕಾಣುವ ಸಂಭ್ರಮೀಕರಣ, ವೈಭವೀಕರಣ ಮತ್ತು ಕೀಳುಗಳೆಯುವುದು ಅಥವಾ ರಾಕ್ಷಸೀಕರಣ ಮಾಡುವುದರಲ್ಲಿಯೂ ಕಾಣಿಸುತ್ತದೆ.

ಒಂದೆಡೆ ನಗರದ ಕೈಗಾರಿಕೆಯ ಮತ್ತು ವೃತ್ತಿಪರ ವರ್ಗಗಳು, ಇನ್ನೊಂದೆಡೆ ಹಳ್ಳಿಯ ಸಿರಿವಂತ ರೈತರ ಪ್ರತಿಷ್ಠಿತ ವರ್ಗಗಳು ಇವುಗಳ ತಿಕ್ಕಾಟದಲ್ಲಿ ಇದರ ಕುರುಹು ಕಾಣಬಹುದು.[44] ಕೇಂದ್ರೀಕೃತ ರಾಜಕೀಯ ವರ್ಗ ಮತ್ತು ಪ್ರಾದೇಶಿಕ ಗುಂಪುಗಳು ಪರಂಪರಾಗತ ಮೇಲ್ಜಾತಿಯವರ ಮತ್ತು ಆರ್ಥಿಕವಾಗಿ ಪ್ರಬಲರಾದವರ ರಾಜಕೀಯ ನಡೆಗಳಿಗೆ ಇಲ್ಲಿರುವ ವಿಭಿನ್ನ ಜಾತಿಗಳ  ಮೈತ್ರಿ-ಸಂಬಂಧಗಳ ಮೂಲಕ ತಡೆಯೊಡ್ಡುವಲ್ಲಿ ಅದಕ್ಕಿಂತ ಹೆಚ್ಚಿನ ಸಂಘರ್ಷ ಕಾಣುತ್ತದೆ.

ಈ ಪಠ್ಯಗಳಲ್ಲಿ ರಾಷ್ಟ್ರದ ಸಂರಚನೆಯ ಪಕ್ಷಿನೋಟವು ಪರಸ್ಪರ ಸಂವಾದಿಯಾಗಿಯೂ, ಸಹಸ್ಪಂದಿಯಾಗಿಯೂ ಕಾಣುವ ಬೇರೆ ಬೇರೆ ವಿಮರ್ಶೆಗಳಲ್ಲಿ ಎದ್ದು ಕಾಣುತ್ತಾ ಚರ್ಚೆಯನ್ನು ರೂಪಿಸುತ್ತವೆ. ಸಮಾನ ಪುರಾಣಗಳು, ಪ್ರತಿಮೆಗಳು, ಧ್ವಜ, ಚರಿತ್ರೆ, ರಾಷ್ಟ್ರನಾಯಕರು, ಸ್ವಾತಂತ್ರ್ಯ  ಹೋರಾಟ, ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರಪಕ್ಷಿಗಳ ಮೂಲಕ ಭಾರತದ ವಿವಿಧತೆಯನ್ನು ಒಪ್ಪುತ್ತಲೇ ಅದನ್ನು ದೊಡ್ಡ ಹರಹಿನಲ್ಲಿ ಏಕತೆಗೆ ಸಮೀಕರಿಸುವ ಪ್ರಯತ್ನ ಮಾಡಲಾಗಿದೆ. ಒಂದೇ ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರಪಕ್ಷಿಗಳ ಮೂಲಕ  ಕೇಂದ್ರಮೂಲವಾದ ರಾಜಕೀಯ ಧೋರಣೆಯನ್ನು ಎತ್ತಿಹಿಡಿಯುತ್ತದೆ. ಪಠ್ಯಗಳಲ್ಲಿ ಗ್ರಾಮಭಾರತದ ಪಾರಮ್ಯವನ್ನು ಎತ್ತಿಹಿಡಿಯಲಾಗಿದೆ ಹಾಗೆಯೇ ಆಧುನಿಕ, ಕೈಗಾರಿಕೀಕರಣಗೊಂಡ ನಗರಗಳ ಹಿರಿಮೆಯನ್ನೂ ತರಲಾಗಿದೆ. ಈ ಎರಡೂ ಪರ್ಯಾಯಗಳು ಅಸಮಂಜಸ ಸಮತೋಲನದಲ್ಲಿ ಕಾಣಿಸಿಕೊಳ್ಳುತ್ತವೆ. ರಾಷ್ಟ್ರದ ಪರಿಕಲ್ಪನೆಯಲ್ಲಿ ರೈತ ಬಹಳ ಮುಖ್ಯ ಆದರೆ ಹಾಗೆ ಕಾಣಿಸಿಕೊಳ್ಳುವವನು ಸಿರಿವಂತ ಸ್ವತಂತ್ರ ರೈತನೇ ಹೊರತು ಕೃಷಿಕಾರ್ಮಿಕ ಅಥವಾ ಬಡ ರೈತ ಅಲ್ಲ. ಅಂತಿಮವಾಗಿ ಪ್ರಬಲ ರಾಜಕೀಯ ಅಧಿಕಾರ, ಸಮಾಜ ವ್ಯವಸ್ಥೆ ಮುಂತಾದ ಬಂಡವಾಳಶಾಹಿ ಹೃದಯಕ್ಕೆ ಹತ್ತಿರವಾದ ಸಂಗತಿಗಳನ್ನೇ ಎತ್ತಿಹಿಡಿಯಲಾಗಿದೆ. ನಿಜವಾದ ಸುಖಕ್ಕೆ ಸಂಪತ್ತು ಮುಖ್ಯವಲ್ಲ ಎಂದು ಹೇಳುತ್ತಾ ಆರ್ಥಿಕ ಅಸಮತೋಲನವನ್ನು ತೇಲಿಸಲಾಗಿದೆ.

ಭಿನ್ನ ಭಿನ್ನ ಧ್ವನಿಗಳನ್ನು ಒಳಗೊಂಡಿರುವುದು ಕೇವಲ ಪ್ರಮುಖ ಸ್ರೋತವನ್ನು ಗಟ್ಟಿಗೊಳಿಸುವುದರ ಸಲುವಾಗಿ.ಹೊರತು ಅದನ್ನು ದುರ್ಬಲಗೊಳಿಸಲು ಅಲ್ಲ. ಸಮಾಜದಲ್ಲಿನ ವಿಭಿನ್ನ ಗುಂಪುಗಳ ಅಸ್ತಿತ್ವ ಒಪ್ಪಿಕೊಳ್ಳುವುದರ ಮೂಲಕ ವಿದ್ಯಾರ್ಥಿಗಳನ್ನು ಅವರ ಸುತ್ತಲಿನ ವಾಸ್ತವಕ್ಕೆ ಹತ್ತಿರ ತರುವುದಿಲ್ಲ. ಬದಲಾಗಿ ಪ್ರಮುಖವಾಹಿನಿ ಮತ್ತು ಉಪಸಂಸ್ಕೃತಿಯ ಲೋಕಗಳ ಮಧ್ಯದ ಕಂದರ ಹೆಚ್ಚಿಸುತ್ತದೆ. ಅಗತ್ಯತೆ. ರಮ್ಯತೆ, ಪುರಾಣೀಕರಣಗಳ ಪ್ರಕ್ರಿಯೆಯ ಮೂಲಕ ಆ ಪಠ್ಯಗಳು ವೈಭವೀಕರಿಸುವ ಅವೇ ಅಂಶಗಳನ್ನು ದೂರ ಸರಿಸಲಾಗಿದೆ. ಗಂಭೀರವಾದ ಪರ್ಯಾಯ ಚಿಂತನೆ, ಪ್ರಶ್ನಾತ್ಮಕ ಧೋರಣೆ, ಧಾರ್ಮಿಕ ಅಲ್ಪಸಂಖ್ಯಾತರು, ದಲಿತರು, ಮಹಿಳೆಯರು ಕಟ್ಟಿಕೊಡುವ ಪರ್ಯಾಯ ಮಾದರಿಗಳ ಮೂಲಕವಾಗಿಯೂ ಈ ಅಂಶಗಳ ಅಸ್ತಿತ್ವವನ್ನು ಗಂಭೀರವಾಗಿ ಪ್ರಶ್ನಿಸುವುದಾಗಲಿ, ನಿರಾಕರಿಸುವುದಾಗಲೀ, ಪರ್ಯಾಯ ಚಿಂತನೆಗೆ ಸಜ್ಜುಗೊಳಿಸುವುದಾಗಲೀ ಆಗುವುದಿಲ್ಲ. ಈ ಪುಸ್ತಕಗಳು ರಾಜ್ಯ ಶಿಕ್ಷಣ ಮಂಡಳಿಗಳ ಮೂಲಕ ರೂಪಿತವಾದವು ಎಂಬ ತಥ್ಯದಿಂದಾಗಿಯೇ ಜಾತಿ ಧರ್ಮಗಳ ಬಂಧನದಿಂದ ಆಚೆ ಬರುವುದಿಲ್ಲ; ಈ ರೂಪಿತ ಆದರ್ಶಗಳ ಪಾರಮ್ಯದ ಸಮಸ್ಯಾತ್ಮಕ ಸ್ವಭಾವವನ್ನು ಬದಲಿಸುವುದಿಲ್ಲ.

## ಟಿಪ್ಪಣಿ